16 November 2025 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 34 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

**ಭಾವನಾಂತರಂಗ**

ಯಾವಾಗಲೂ ಅನಾದರ ತೋರಿದವರು,
ಯಾವುದೋ ಕಾರಣಕ್ಕೆ
ಆದರಿಸಲು ತೊಡಗಿದರೆ
ಮನಸ್ಸು ಕಾರಣ ಹುಡುಕುತ್ತದೆ!
ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ನರಕ ಅಂದ್ರೆ
ಹೇಗಿರುತ್ತೆ ಗೊತ್ತಾ ?
ನಾವು ಮಾಡದೇ ಇರೋ
ತಪ್ಪಿಗೆ
ಅನ್ಯಾಯವಾಗಿ ಶಿಕ್ಷೆ
ಅನುಭವಿಸುತ್ತೇವೆ ನೋಡಿ
ಅದೇ ನರಕ
ಮೈಲಾರ ಸಾವಿತ್ರಿಬಾಯಿ

# ಸಂಪುಟ ವಿಸ್ತರಣೆಗೆ ಹೈಕಮಾಂಡ್ ಅಸ್ತು?

## ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಗದ್ದುಗೆ ಏರುವ ಕನಸು ಭಗ್ನ

**ನವದೆಹಲಿ:** ರಾಜ್ಯದಲ್ಲಿ ನವೆಂಬರ್ ಕ್ರಾಂತಿ ನಡೆಯುವ ಸಾಧ್ಯತೆ ಇಲ್ಲ. ಬದಲಿಗೆ ಸಚಿವ ಸಂಪುಟ ಪುನಾರಚನೆಗೆ ಕಾಂಗ್ರೆಸ್ ಹೈಕಮಾಂಡ್ ಸೂಚನೆ ನೀಡಿದೆ ಎಂದು ತಿಳಿದು ಬಂದಿದೆ. ಈ ಮೂಲಕ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಮುಖ್ಯಮಂತ್ರಿ ಗದ್ದುಗೆ ಏರುವ ಕನಸು ಭಗ್ನವಾಗಿದೆ.

ದೆಹಲಿ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದಾರೆ. ಈ ಸಂದರ್ಭದಲ್ಲಿ ಸಚಿವ ಸಂಪುಟ ಪುನಾರಚನೆಗೆ ರಾಹುಲ್ ಗಾಂಧಿ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ ಎನ್ನಲಾಗಿದೆ. ಬಿಹಾರ ಚುನಾವಣೆ ಹಿನ್ನೆಲೆಯಲ್ಲಿ ಈ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ, ರಾಹುಲ್ ಗಾಂಧಿಯನ್ನು ಭೇಟಿಯಾಗಲು ಅವಕಾಶ ಸಿಕ್ಕಿರಲಿಲ್ಲ. ಆದರೆ ಈಗ ಸಿದ್ದರಾಮಯ್ಯ ಅವರಿಗೆ ಭೇಟಿಯ ಅವಕಾಶ ದೊರೆತಿದೆ.


ಅಲ್ಲದೆ ಎಐಸಿಸಿ ಅಧ್ಯಕ್ಷ ಮಲ್ಲಿಕಾ ರ್ಜುನ ಖರ್ಗೆ ಅವರಿಗೆ ಸಂಪುಟ ಪುನಾರಚನೆ ಮಾಡಲು ಸಲಹೆ ನೀಡುವಂತೆ ಹೈಕಮಾಂಡ್ ಸೂಚಿಸಿದೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ಸೋಮವಾರ ಎಐಸಿಸಿ ಅಧ್ಯಕ್ಷ



### ಸಿಎಂ, ಡಿಸಿಎಂ ಪ್ರತ್ಯೇಕ ಭೇಟಿ

**ನವದೆಹಲಿ:** ದೆಹಲಿಯಲ್ಲಿ ರಾಹುಲ್ ಗಾಂಧಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಭೇಟಿಯಾಗಿದ್ದಾರೆ. ಸಿಎಂ ಹಾಗೂ ಡಿಸಿಎಂ ಪ್ರತ್ಯೇಕ ಭೇಟಿ ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ. ಜನಪಥ್ ರಸ್ತೆಯಲ್ಲಿರುವ ಸೋನಿಯಾ ಗಾಂಧಿ ನಿವಾಸದಲ್ಲಿ ರಾಹುಲ್ ಗಾಂಧಿ ಭೇಟಿಯಾಗಿ ಸಿಎಂ ಹಲವು ವಿಚಾರಗಳನ್ನು ಚರ್ಚಿಸಿದ್ದಾರೆ ಎನ್ನಲಾಗಿದೆ. ಬಿಹಾರದ ಫಲಿತಾಂಶ ಹಾಗೂ ಕರ್ನಾಟಕದ ಸಚಿವ ಸಂಪುಟ ಪುನಾರಚನೆ ವಿಚಾರವಾಗಿ ನಾಯಕರು ಚರ್ಚಿಸಿದ್ದಾರೆ. ಸಂಪುಟ ಪುನಾರಚನೆ ಪ್ರಸ್ತಾಪವನ್ನು ಸಿಎಂ ಇಟ್ಟಿದ್ದಾರೆ. ಬಿಹಾರದ ಚುನಾವಣೆ ಸೋಲಿನ ಬಗ್ಗೆ ರಾಹುಲ್ ಗಾಂ

ಪುಟ 2ಕ್ಕೆ



### ಹಲವು ಸಚಿವರಿಗೆ ಕೊಕ್

**ಬೆಂಗಳೂರು:** ರಾಜ್ಯದಲ್ಲಿ 10ರಿಂದ 12 ಸಚಿವರಿಗೆ ಕೊಕ್ ನೀಡುವ ಸಾಧ್ಯತೆ ಇದೆ. ಯಾರನ್ನು ಸಚಿವ ಸ್ಥಾನದಿಂದ ಕೆಳಗಿಳಿಸುತ್ತಾರೆ ಎಂಬುದು ಈಗ ಕುತೂಹಲ ಕೆರಳಿಸಿದೆ. ಮತ್ತೊಂದೆಡೆ ಕಾಂಗ್ರೆಸ್‌ನಲ್ಲಿ ಸಚಿವಾಕಾಂಕ್ಷಿಗಳ ಪಟ್ಟಿಯೂ ದೊಡ್ಡದಿದೆ. ಬೇಳೂರು ಗೋಪಾ ಲಕೃಷ್ಣ, ಬಿ.ಕೆ.ಹರಿಪ್ರಸಾದ್, ಹ್ಯಾರಿಸ್, ಸಲೀಂ ಅಹಮದ್, ಆರ್.ವಿ ದೇಶಪಾಂಡೆ, ಟಿ.ಬಿ. ಜಯಚಂದ್ರ, ಬಿ.ಆರ್.ಪಾಟೀಲ್, ನರೇಂದ್ರಸ್ವಾಮಿ, ಎಂ.ಕೃಷ್ಣಪ್ಪ, ಮಾಗಡಿ ಬಾಲಕೃಷ್ಣ, ಲಕ್ಷ್ಮಣ್ ಸವದಿ, ಎಸ್.ಪೊನ್ನಣ್ಣ, ಶಿವಲಿಂಗೇಗೌಡ, ರೂಪಕಲಾ ಶಶಿಧರ್, ಮಾಲೂರು ನಂಜೇಗೌಡ ಸೇರಿದಂತೆ ಹಲವು ನಾಯಕರು ಸಚಿವ ಸಂಪುಟ ವಿಸ್ತರಣೆ ಮೇಲೆ ಕಣ್ಣಿಟ್ಟಿದ್ದಾರೆ.

ಸೋತಿರುವ ಹಿನ್ನೆಲೆಯಲ್ಲಿ ಸದ್ಯದ ಪರಿಸ್ಥಿತಿಯಲ್ಲಿ ಕರ್ನಾಟಕದಲ್ಲಿ ಪ್ರಬಲ ನಾಯಕರಾದ ಸಿದ್ದರಾಮಯ್ಯ ಅವ ರನ್ನು ಅಧಿಕಾರದಿಂದ ಕೆಳಗಿಳಿಸಿ ರಾಜ್ಯ ದಲ್ಲಿಯೂ ಅಧಿಕಾರ ಕಳೆದುಕೊಳ್ಳು ವುದು ಬೇಡ ಎಂಬ ಅಭಿಪ್ರಾಯಕ್ಕೆ ಹೈಕಮಾಂಡ್ ಬಂದಿದೆ ಎನ್ನಲಾಗಿದೆ.

ಕರ್ನಾಟಕ ಮತ್ತು ತೆಲಂ ಗಾಣವನ್ನು ಹೊರತುಪಡಿ ಸಿದರೆ ಉಳಿದೆಡೆ ಪಕ್ಷವು ಉತ್ತಮವಾಗಿ ಕಾರ್ಯನಿ ರ್ವಹಿಸುತ್ತಿಲ್ಲ. ತಮಿಳುನಾಡಿನಂತಹ ರಾಜ್ಯಗಳಲ್ಲಿಯೂ ಸಹ ಡಿಎಂಕೆ ಯನ್ನು ಬೆಂಬಲಿಸುತ್ತಿದ್ದಾರೆ. ಈ ರಾಜ್ಯಗಳಲ್ಲಿ ಇನ್ನು ಮುಂದೆ ಪಕ್ಷ, ಸರ್ಕಾರವನ್ನು ಹೇಗೆ ರಕ್ಷಿಸುವುದು ಮತ್ತು ಆಡಳಿತವನ್ನು ಹೇಗೆ ಮುಂದಕ್ಕೆ ಕೊಂಡೊಯ್ಯುವುದು ಎಂಬ ಕಡೆ ಕಾಂಗ್ರೆಸ್ ಹೈಕಮಾಂಡ್ ಗಮನಹರಿಸಿದೆ ಎನ್ನಲಾಗಿದೆ.




# ನಕಲಿ ನಂದಿನಿ ತುಪ್ಪ ಜಾಲ ಪತ್ತೆ

**▸▸ 1.5 ಕೋಟಿ ಮೌಲ್ಯದ 8 ಸಾವಿರ ಲೀಟರ್ ನಕಲಿ ತುಪ್ಪ ವಶ**

**ಬೆಂಗಳೂರು:** ನಗರದಲ್ಲಿ ನಕಲಿ ನಂದಿನಿ ತುಪ್ಪ ಮಾರಾಟ ಮಾಡುತ್ತಿದ್ದ ಜಾಲ ಪತ್ತೆಯಾಗಿದೆ. ಪೊಲೀಸರು 1.5 ಕೋಟಿ ರೂ. ಮೌಲ್ಯದ 8 ಸಾವಿರ ಲೀಟರ್ ತುಪ್ಪವನ್ನು ಸೀಜ್ ಮಾಡಿದ್ದಾರೆ.

ಈ ಸಂಬಂಧ ಕೆಎಂಎಫ್ ಡಿಸ್ಟ್ರಿಬ್ಯೂಟರ್ ಮಹೇಂದ್ರ, ಪುತ್ರ ದೀಪಕ್, ಸರಬರಾಜುದಾರರಾದ ಮುನಿರಾಜು ಹಾಗೂ ಅಭಿ ಅರಸು ಎಂಬ ನಾಲ್ವರ ಗ್ಯಾಂಗ್‌ನ್ನು ಪೊಲೀಸರು ಬಂಧಿಸಿದ್ದಾರೆ. ಈ ನಾಲ್ವರು ಆರೋಪಿಗಳು ಸೇರಿಕೊಂಡು ಬೆಂಗಳೂರಿನಲ್ಲಿದ್ದ ನಂದಿನಿ ಪಾರ್ಲರ್‌ಗಳಿಗೆ ನಕಲಿ ತುಪ್ಪವನ್ನು ಸರಬರಾಜು ಮಾಡುತ್ತಿದ್ದರು. ಹೊರ ರಾಜ್ಯದಲ್ಲಿ ಕಲಬೆರಕೆ ತುಪ್ಪವನ್ನು ತಯಾರಿಸಿ, ಪ್ಯಾಕೆಟ್ ಹಾಗೂ ಪ್ಲಾಸ್ಟಿಕ್ ಬಾಟಲ್‌ನಲ್ಲಿ ಹಾಕಿ ಸಪ್ಲೈ ಮಾಡುತ್ತಿದ್ದರು.




ತಮಿಳುನಾಡಿನಲ್ಲಿ ತಯಾರಿಸಿದ ನಕಲಿ ತುಪ್ಪವನ್ನು ರಾಜ್ಯಕ್ಕೆ ಸರಬರಾಜು ಮಾಡಲಾಗುತ್ತಿತ್ತು. ಮತ್ತೊಬ್ಬ ಅದನ್ನು ಬೆಂಗಳೂರಿಗೆ ಕಳುಹಿಸುತ್ತಿದ್ದ. ಈ ಜಾಲದಲ್ಲಿ ಕೆಎಂಎಫ್ ಡಿಸ್ಟ್ರಿಬ್ಯೂಟರ್ ಹಾಗೂ ಅವರ ಪುತ್ರ ಕೂಡ ಭಾಗಿಯಾಗಿರುವುದು ಆತಂಕಕಾರಿ ವಿಚಾರವಾಗಿದೆ. ಸದ್ಯ ಪೊಲೀಸರು ನಾಲ್ವರ ಮುಖವಾಡ ಕಳಚಿ ಬಂಧಿಸಿದ್ದಾರೆ. ಬರೋಬ್ಬರಿ 1.50 ಕೋಟಿ ರೂ. ಮೌಲ್ಯದ 8 ಸಾವಿರ ಲೀಟರ್ ನಕಲಿ ತುಪ್ಪವನ್ನು ಜಪ್ತಿ ಮಾಡಲಾಗಿದೆ.

ಕಳೆದ ವರ್ಷ ಮೈಸೂರಿನಲ್ಲಿ ಸಹ ನಕಲಿ ನಂದಿನಿ ತುಪ್ಪ ತಯಾರಿಸುತ್ತಿದ್ದ ಬೃಹತ್ ಜಾಲವನ್ನು ಪೊಲೀಸರು ಬಯಲಿಗೆ ಎಳೆದಿದ್ದರು. ಕೋಟ್ಯಂತರ ಬೆಲೆಯ ನಕಲಿ ತುಪ್ಪವನ್ನು ವಶಪಡಿಸಿಕೊಳ್ಳಲಾಗಿತ್ತು. ಅಧಿಕೃತ ನಂದಿನಿ ಮಳಿಗೆಗಳಲ್ಲಿಯೇ ನಕಲಿ ತುಪ್ಪ ಮಾರಾಟ ಮಾಡುತ್ತಿರುವುದು ಆತಂಕಕಾರಿ ವಿಚಾರವಾಗಿದೆ.

# ರಾಹುಲ್-ಖರ್ಗೆ ಸಭೆ: ಸೋಲಿನ ಪರಾಮರ್ಶೆ

**ನವದೆಹಲಿ:** ಬಿಹಾರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯ ಸೋಲು ಕಂಡಿರುವ ಬೆನ್ನಲ್ಲೇ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿ ಮಹತ್ವದ ಸಭೆ ನಡೆಸಿದ್ದಾರೆ.

ದೆಹಲಿಯ ರಾಜಾಜಿ ಮಾರ್ಗ್‌ನಲ್ಲಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿ ರಾಹುಲ್ ಗಾಂಧಿ ಸಭೆ ನಡೆಸಿದರು. ಕಾಂಗ್ರೆಸ್ ಸೋಲು ಕುರಿತು ಚರ್ಚೆ ನಡೆಸಿದ್ದಾರೆ. ಎಐಸಿಸಿ ಪ್ರಧಾನ ಕಾರ್ಯ



ದರ್ಶಿ ಕೆಸಿ.ವೇಣುಗೋಪಾಲ್, ಪಕ್ಷದ ಖಜಾಂಚಿ ಅಜಯ್ ಮಾಕನ್ ಮತ್ತು ಎಐಸಿಸಿ ಬಿಹಾರ ಉಸ್ತುವಾರಿ ಕೃಷ್ಣ ಅಲ್ಲಾವರು ಅವರು ಭಾಗಿಯಾಗಿದ್ದರು. ಸಭೆಯಲ್ಲಿ ಬಿಹಾರದಲ್ಲಿ ಕಾಂಗ್ರೆಸ್‌ಗೆ ಉಂಟಾಗಿರುವ ಭಾರಿ ಸೋಲಿನ ಬಗ್ಗೆ ಕೂಲಂಕುಷವಾಗಿ ಚರ್ಚೆ ನಡೆಸಲಾಗಿದೆ.

## ಸೆಲ್ಫಿಗಾಗಿ ಜಲಪಾತಕ್ಕೆ ಬಿದ್ದು ಯುವಕ ಸಾವು

**ಚಿಕ್ಕಮಗಳೂರು:** ಜಲಪಾತದ ಬಳಿ ಸೆಲ್ಫಿ ಕ್ಲಿಕ್ಕಿಸಿಕೊಳ್ಳುವಾಗ ಕಾಲು ಜಾರಿ ಬಿದ್ದು ಬಿ.ಇ ವಿದ್ಯಾರ್ಥಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಮಲ್ಲೇನಹಳ್ಳಿ ಸಮೀಪದ ಕಾಮೇನಹಳ್ಳಿ ಜಲಪಾತದ ಬಳಿ ನಡೆದಿದೆ. ವರುಣ್ ದೇಸಾಯಿ (19) ಮೃತ ಯುವಕ.

ಬೆಳಗಾವಿ ಮೂಲದ ವರುಣ್ ಚಿಕ್ಕಮಗಳೂರು ನಗರದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೊದಲ ವರ್ಷದ ಬಿಇ ಓದುತ್ತಿದ್ದ. ಐವರು ಸ್ನೇಹಿತರ ಜೊತೆ ಮೂರು ಬೈಕಿನಲ್ಲಿ ಕಾಮೇನಹಳ್ಳಿ ಜಲಪಾತದ ಬಳಿ ಹೋಗಿದ್ದ. ಈ ವೇಳೆ ಜಲಪಾತದ ಪ್ರದೇಶದ ಅರಿವಿಲ್ಲದೆ ಜಲಪಾತದ ಬಳಿ ಸೆಲ್ಫಿ ಕ್ಲಿಕ್ಕಿಸಿಕೊಳ್ಳುವಾಗ ಕಾಲು ಜಾರಿ ಬಿದ್ದು ಮೃತಪಟ್ಟಿದ್ದಾನೆ. ಪೊಲೀಸರು, ಅಗ್ನಿಶಾಮಕ ದಳದ ಸಿಬ್ಬಂದಿ ಮೃತದೇಹಕ್ಕಾಗಿ ಶೋಧ ನಡೆಸಿದ ನಂತರ ಪತ್ತೆಯಾಗಿದೆ.

## ಡಿ.8ರಿಂದ ಅಧಿವೇಶನ



**ಬೆಂಗಳೂರು:** ಬೆಳಗಾವಿ ಸುವರ್ಣಸೌಧದಲ್ಲಿ ಡಿಸೆಂಬರ್ 8ರಿಂದ 10 ದಿನಗಳ ಕಾಲ ವಿಧಾನಮಂಡಲದ ಚಳಿಗಾಲದ ಅಧಿವೇಶನ ನಡೆಯಲಿದೆ. ಈ ಸಂಬಂಧ ರಾಜ್ಯ ಸರ್ಕಾರ ಅಧಿಕೃತ ಪ್ರಕಟಣೆ ಹೊರಡಿಸಿದೆ. ಡಿಸೆಂಬರ್ 8 ರಿಂದ 19 ರವರೆಗೆ ಚಳಿಗಾಲದ ಅಧಿವೇಶನ ನಡೆಯಲಿದೆ ಎಂದು ತಿಳಿಸಿದೆ. ಗುರುವಾರ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಅಧಿವೇಶನ ಸಂಬಂಧ ನಿರ್ಣಯ ಕೈಗೊಳ್ಳಲಾಗಿತ್ತು. ಇಂದು ಅಧಿಕೃತ ಪ್ರಕಟಣೆ ಹೊರಡಿಸಲಾಗಿದೆ.

# ಮತಕಳವು ಆರೋಪ ಚುನಾವಣೆ ತಂತ್ರ

**ಜನರ ದಿಕ್ಕು ತಪ್ಪಿಸಲು ಅರ್ಧ ಸತ್ಯ: ಸಂಸದ ಯದುವೀರ್ ಟೀಕೆ**

**ಮೈಸೂರು:** ಕಾಂಗ್ರೆಸ್ ನಾಯಕರ ಮತಕಳ್ಳತನ ಆರೋಪಕ್ಕೆ ಬೆಲೆ ಇಲ್ಲವೆಂಬುದು ಬಿಹಾರ ವಿಧಾನಸಭಾ ಚುನಾವಣೆಯಿಂದ ಸಾಬೀತಾಗಿದೆ ಎಂದು ಬಿಜೆಪಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ನಗರದಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮತಕಳ್ಳತನಕ್ಕೆ ಸಂಬಂಧಿಸಿದಂತೆ ಸಾಕ್ಷಿ ಇದ್ದರೆ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸುವಂತೆ ಹೇಳುತ್ತಲೇ ಬಂದಿದ್ದೇವೆ. ಆದರೆ, ಅವರು ಈವರೆಗೂ ದೂರು ಕೊಟ್ಟಿಲ್ಲ. ಆ ವಿಷಯವನ್ನು ಚುನಾವಣಾ ತಂತ್ರವನ್ನಾಗಿ ಬಳಸಿಕೊಂಡರಷ್ಟೆ ಎಂದು ಟೀಕಿಸಿದರು.



ಜನರ ದಿಕ್ಕು ತಪ್ಪಿಸುವುದು, ಅರ್ಧ ಸತ್ಯ ಹೇಳುವುದು ಹಾಗೂ ಅಪಪ್ರಚಾರ ಮಾಡುವುದೇ ಕಾಂಗ್ರೆಸ್‌ನವರ ಕುತಂತ್ರ. ಈ ನಿಟ್ಟಿನಲ್ಲಿ ಅವರು ಆತ್ಮಾವಲೋಕನ ಮಾಡಿಕೊಳ್ಳಲಿ. ಬಿಹಾರ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ನಾಯಕರು ವಿದೇಶದಲ್ಲಿ ಕುಳಿತು ಕಾಫಿ ಕುಡಿಯುತ್ತಿದ್ದುದ್ದನ್ನು ನೋಡಿದ್ದೇವೆ. ಬಿಜೆಪಿ ನಾಯಕರು ಹಳ್ಳಿಹಳ್ಳಿಗೂ ಹೋಗಿ ಪ್ರಚಾರ ಮಾಡಿದ್ದಾರೆ. ಇದರಿಂದಲೇ ಎನ್‌ಡಿಎ ಮೈತ್ರಿಕೂಟಕ್ಕೆ ಅದ್ಭುತ ಫಲಿತಾಂಶ ದೊರೆತಿದೆ. ನರೇಂದ್ರ ಮೋದಿ ನಾಯಕತ್ವಕ್ಕೆ ಹಾಗೂ ಎನ್‌ಡಿಎ ಮೈತ್ರಿಕೂಟಕ್ಕೆ ಜಯ ಸಿಕ್ಕಿದೆ ಎಂದು ಹೇಳಿದರು.

ಜನತೆಯನ್ನು ಒಂದು ಸಂಪತ್ತು ಎಂದು ಕೊಂಡವರಿಗೆ ಜನ ಪಾಠ ಕಲಿಸಿದ್ದಾರೆ. ಕಾಂಗ್ರೆಸ್ ಹಿಂದಿನಿಂದಲೂ ಅಭಿವೃದ್ಧಿಯಿಂದ ದೂರವೇ ಇದೆ. ಅಭಿವೃದ್ಧಿ ರಾಜಕಾರಣವನ್ನು ಆ ಪಕ್ಷದವರು ಮಾಡಿಯೇ ಇಲ್ಲ. ಸಮಾಜ ವಿಭಜನೆ ಮಾಡಿ ಲಾಭ ಪಡೆದುಕೊಳ್ಳಲು ಮುಂದಾಗುತ್ತದೆ ಎಂದು ಆರೋಪಿಸಿದರು.

ದೇಶವೀಗ ಏಕತೆಯಲ್ಲಿ ಮುನ್ನುಗ್ಗುತ್ತಿದೆ. ವಿಕಸಿತ ಭಾರತಕ್ಕೆ ಜನರ ಸ್ಪಂದನೆ ಇದೆ. 2028ಕ್ಕೆ ರಾಜ್ಯದಲ್ಲೂ ಬಿಜೆಪಿ ಅಧಿಕಾರಕ್ಕೆ ಬರುತ್ತದೆ.

ಪುಟ 2ಕ್ಕೆ

# ವೃಕ್ಷಮಾತೆ ತಿಮ್ಮಕ್ಕ ಹೆಸರಿನಲ್ಲಿ ಪ್ರಶಸ್ತಿ

**114 ಸ್ಥಳಗಳಲ್ಲಿ ಸಸಿ ನೆಟ್ಟು ಪೋಷಣೆ | ಸಚಿವ ಈಶ್ವರ್ ಖಂಡ್ರೆ ಘೋಷಣೆ**

**ಬೆಂಗಳೂರು:** ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಸಾಲುಮರದ ತಿಮ್ಮಕ್ಕ ಅವರ ಗೌರವಾರ್ಥ ರಾಜ್ಯದ 114 ಸ್ಥಳದಲ್ಲಿ ತಲಾ 114 ಸಸಿ ನೆಟ್ಟು ಪೋಷಣೆ ಮಾಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಶನಿವಾರ ತಿಳಿಸಿದರು.

ಜ್ಞಾನಭಾರತಿ ಕಲಾಗ್ರಾಮದಲ್ಲಿ ಶತಾಯುಷಿ ಸಾಲುಮರದ ತಿಮ್ಮಕ್ಕ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದ ಅವರು ಮಾತನಾಡಿ, 114 ವರ್ಷ ಜೀವಿಸಿದ್ದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ಗೌರವಾರ್ಥ ರಾಜ್ಯದ 114 ಸ್ಥಳಗಳಲ್ಲಿ ಸಸಿ ನೆಡಲಾಗುವುದು. ಸಾಲುಮರದ ತಿಮ್ಮಕ್ಕ ಅವರ ಹೆಸರಿನಲ್ಲಿ ಪರಿಸರ ಪ್ರಶಸ್ತಿ ನೀಡಲಾಗುವುದು ಎಂದು ಹೇಳಿದರು.

ಮರಗಳನ್ನೇ ಮಕ್ಕಳಂತೆ ಮಮಕಾರದಿಂದ ಬೆಳೆಸಿ ವಿಶ್ವಕ್ಕೆ ವೃಕ್ಷಗಳ ಮಹತ್ವ ಸಾರಿದ ಸಾಲುಮರದ ತಿಮ್ಮಕ್ಕ ಅವರ ಹೆಸರಲ್ಲಿ ಸಸಿನೆಡುವ ಮೂಲಕ ಅರಣ್ಯ ಇಲಾಖೆ ಗೌರವ ಸಲ್ಲಿಸಲಿದೆ. ಅರಣ್ಯ ಇಲಾಖೆ ಸಾಲುಮರದ ತಿಮ್ಮಕ್ಕ ಅವರನ್ನು ಪರಿಸರ ರಾಯಭಾರಿಯಾಗಿ ಪುರಸ್ಕರಿಸಿತ್ತು. ಅಜ್ಜಿಯ ಪ್ರೇರಣೆಯಿಂದ ನೂರಾರು ಜನ ತಮ್ಮ ಕೈಲಾದಷ್ಟು ಸಸಿ ನೆಟ್ಟು ಪೋಷಿಸುತ್ತಿದ್ದಾರೆ. ಲಕ್ಷಾಂತರ ಪರಿಸರ ಪ್ರೇಮಿಗಳಿಗೆ ಪ್ರೇರಣೆಯಾಗಿದ್ದ ತಿಮ್ಮಕ್ಕ ನಿಧನದಿಂದ



ರಾಜ್ಯ ನಿಷ್ಠಾವಂತ ಪರಿಸರ ಕಾಳಜಿಯ ಮಹಾಜೀವಿಯನ್ನು ಕಳೆದುಕೊಂಡಿದೆ ಎಂದು ಸಚಿವರು ದುಃಖ ವ್ಯಕ್ತಪಡಿಸಿದರು.

## ಮೈಸೂರು ನಗರಪಾಲಿಕೆ ಮೇಲ್ದರ್ಜೆಗೆ

**333 ಕಿ.ಮೀ. ವಿಸ್ತರಣೆಗೆ ಸಿದ್ಧತೆ: ಸಿಎಂ ಸೂಚನೆ**

**ಮೈಸೂರು:** ಮೈಸೂರು ಮಹಾನಗರ ಪಾಲಿಕೆಯನ್ನು 'ಗ್ರೇಡ್ ಒನ್ ಮಹಾನಗರ ಪಾಲಿಕೆ'ಯಾಗಿ ಮೇಲ್ದರ್ಜೆಗೆ ಏರಿಸಲು ಸಿದ್ಧತೆ ನಡೆದಿದೆ. ಸಮಗ್ರ ವರದಿ ಸಲ್ಲಿಸುವುದಕ್ಕೂ ಮುನ್ನ ಸಾರ್ವಜನಿಕವಾಗಿ ಚರ್ಚಿಸಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದರು.



ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ಕಾಂಗ್ರೆಸ್ ಮುಖಂಡರ ಸಲಹೆ ಸ್ವೀಕರಿಸಿ ಮಾತನಾಡಿದ ಅವರು, ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಮಹಾನಗರ ಪಾಲಿಕೆಯನ್ನು ಮೇಲ್ದರ್ಜೆಗೆ ಏರಿಸುವ ಸಂಬಂಧ ವಿಸ್ತೃತವಾದ ಸಭೆ ನಡೆದಿದೆ. ಮುಖ್ಯಮಂತ್ರಿ ನಿರ್ದೇಶನದಂತೆ ರೂಪುರೇಷೆಗಳನ್ನು ಸಿದ್ಧಪಡಿಸಲಾಗಿದೆ. ಗ್ರೇಡ್ ಒನ್

ಪುಟ 2ಕ್ಕೆ


## ಜ್ಞಾನಭಾರತಿ ಕಲಾ ಗ್ರಾಮದಲ್ಲಿ 'ಮರಳಿ ಮಣ್ಣಿಗೆ' ವೃಕ್ಷ ಮಾತೆ

**ಬೆಂಗಳೂರು:** ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ವೃಕ್ಷ ಮಾತೆ ಸಾಲುಮರದ ತಿಮ್ಮಕ್ಕ ಅವರ ಅಂತ್ಯ ಸಂಸ್ಕಾರ ಬೆಂಗಳೂರಿನ ಜ್ಞಾನಭಾರತಿ ಕಲಾಗ್ರಾಮದಲ್ಲಿ ಶನಿವಾರ ನಡೆಯಿತು. ವೃಕ್ಷಮಾತೆ ಇನ್ನೂ ನೆನಪು ಮಾತ್ರ.

ಜ್ಞಾನಭಾರತಿ ಕಲಾಗ್ರಾಮದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಶತಾಯುಷಿ, 114 ವರ್ಷದ ಸಾಲು ಮರದ ತಿಮ್ಮಕ್ಕ ಅಂತ್ಯಕ್ರಿಯೆ ನೆರವೇರಿತು. ಈ ವೇಳೆ ಮೂರು ಸುತ್ತು ಕುಶಾಲತೋಪು ಸಿಡಿಸುವ ಮೂಲಕ ಪೊಲೀಸರು ತಿಮ್ಮಕ್ಕ ಅವರಿಗೆ ವಿಶೇಷ ಗೌರವ ಸಲ್ಲಿಸಿದರು. ಗೃಹ ಸಚಿವ ಡಾ.ಜಿ. ಪರಮೇಶ್ವರ್ ಹಾಗೂ ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೇರಿದಂತೆ ಹಲವು ಗಣ್ಯರು ವೃಕ್ಷಮಾತೆಗೆ ಅಂತಿಮ ಗೌರವ ಸಲ್ಲಿಸಿದರು.

ವಯೋಸಹಜ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ತಿಮ್ಮಕ್ಕ ಅವರನ್ನು ಎರಡು ದಿನಗಳ ಹಿಂದೆ ಬೆಂಗಳೂರಿನ ಜಯನಗರದ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಶುಕ್ರವಾರ

ಪುಟ 2ಕ್ಕೆ



## ಸಿದ್ದು ಸರ್ಕಾರದಲ್ಲೂ ಭ್ರಷ್ಟಾಚಾರ

**▸▸ ನಿವೃತ್ತ ಲೋಕಾಯುಕ್ತ ಸಂತೋಷ್ ಹೆಗ್ಡೆ ಆರೋಪ**


**ಮಂಡ್ಯ:** ಬಿಜೆಪಿ, ಜೆಡಿಎಸ್ ಸರ್ಕಾರದಲ್ಲಿ ಇದ್ದಂತೆ ಸಿದ್ದರಾಮಯ್ಯ ಸರ್ಕಾರದಲ್ಲೂ ಭ್ರಷ್ಟಾಚಾರ ಇದೆ. ಬಿಹಾರ ಚುನಾವಣೆಯಲ್ಲಿ ಸೋಲ್ತೀವಿ ಎಂದು ಮೊದಲೇ ಕಾಂಗ್ರೆಸ್‌ನವರಿಗೆ ಗೊತ್ತಿತ್ತು. ಅದಕ್ಕೆ ವೋಟ್ ಚೋರಿ ವಿಚಾರ ಶುರು ಮಾಡಿದರು ಎಂದು ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಹೇಳಿದರು.




ನಗರದಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಅವರು ಮಾತನಾಡಿದ ಅವರು, ಭ್ರಷ್ಟಾಚಾರ ನಿರ್ಮೂಲನೆ ಮಾಡೋಕೆ ಸಾಧ್ಯವೇ ಇಲ್ಲ. ಪುರಾಣದಲ್ಲೂ ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪವಿದೆ. ಹಣ ಕೊಟ್ಟು ಹುದ್ದೆಗೆ ಹೋದವರಿಗೆ ಹಣ ಮಾಡೋದೇ ಕೆಲಸವಾಗಿದೆ. ಶೇ.40ರಷ್ಟು ಕಮಿಷನ್ ಕೊಟ್ಟರೆ ಉಳಿದ ಹಣದಲ್ಲಿ ರಸ್ತೆ ಗುಂಡಿ ಮುಚ್ಚೋದು ಹೇಗೆ? ದೇಶದಲ್ಲಿ ಅನೇಕ ಸಮಸ್ಯೆಗಳಿದ್ದರೂ ಸೌಲಭ್ಯ

ಪುಟ 2ಕ್ಕೆ

# ಮೃಗಾಲಯದಲ್ಲಿ 28 ಕೃಷ್ಣಮೃಗಗಳು ಸಾವು



**ಬೆಳಗಾವಿ:** ಬೆಳಗಾವಿಯ ಕಿತ್ತೂರು ರಾಣಿ ಚೆನ್ನಮ್ಮ ಮೃಗಾಲಯದಲ್ಲಿ 2 ದಿನಗಳಲ್ಲಿ 28 ಕೃಷ್ಣಮೃಗಗಳು ನಿಗೂಢವಾಗಿ ಸಾವನ್ನಪ್ಪಿರುವ ಘಟನೆ ನಡೆದಿದೆ.

ಮೃಗಗಳಲ್ಲಿ ಬ್ಯಾಕ್ಟೀರಿಯಾ ಇನ್ಫೆಕ್ಷನ್‌ನಿಂದ ಸಾವು ಸಂಭವಿಸಿರುವ ಅನುಮಾನ ವ್ಯಕ್ತವಾಗಿದೆ. ಆದರೆ, ನಿಜವಾದ ಕಾರಣ ಇನ್ನೂ ತಿಳಿದುಬಂದಿಲ್ಲ ಎಂದು ಮೃಗಾಲಯದ ಎಸಿಎಫ್ ನಾಗರಾಜ್ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ.

ಒಟ್ಟು 38 ಕೃಷ್ಣಮೃಗಗಳಲ್ಲಿ ಇದುವರೆಗೆ 28 ಮೃಗಗಳು ಎರಡೇ ದಿನಗಳಲ್ಲಿ ಸಾವನ್ನಪ್ಪಿವೆ.

ಪುಟ 2ಕ್ಕೆ

### ತನಿಖೆಗೆ ಸಚಿವ ಖಂಡ್ರೆ ಸೂಚನೆ

**ಬೆಳಗಾವಿ:** ಭೂತರಾಮನಹಟ್ಟಿಯ ಕಿತ್ತೂರುರಾಣಿ ಚೆನ್ನಮ್ಮ ಕಿರು ಮೃಗಾಲಯದಲ್ಲಿ 28 ಜಿಂಕೆಗಳು ಅಸಹಜವಾಗಿ ಸಾವನ್ನಪ್ಪಿರುವ ಕುರಿತು ತನಿಖೆ ನಡೆಸಲು ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೂಚಿಸಿದ್ದಾರೆ.ಘಟನೆ ಕುರಿತು



ಪುಟ 2ಕ್ಕೆ

# ರಾಹುಲ್ ಗಾಂಧಿಗೆ ರಾಹುಕಾಲ ಶುರು!

## ಇನ್ಮುಂದೆ ಸಿದ್ದು ಹೇಳಿದಂತೆ 'ರಾಗಾ ಹಾಡಬೇಕು': ಅಶೋಕ್ ಲೇವಡಿ

**ಬೆಂಗಳೂರು:** ಇನ್ಮುಂದೆ ರಾಹುಲ್ ಗಾಂಧಿಗೆ ರಾಹುಕಾಲ ಶುರುವಾಗಲಿದೆ. ಬಿಹಾರ ಚುನಾವಣೆ ಸೋತಿದ್ದರಿಂದ ಸಿದ್ದರಾಮಯ್ಯ ಹೇಳಿದಂತೆ ಕೇಳುವುದು ರಾಹುಲ್‌ಗೆ ಅನಿವಾರ್ಯವಾಗಲಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಲೇವಡಿ ಮಾಡಿದ್ದಾರೆ.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಬಿಹಾರ ಫಲಿತಾಂಶದಿಂದ ಕಾಂಗ್ರೆಸ್ ಹೈಕಮಾಂಡ್ ಮಂಕಾಗಿದೆ. ಆದರೆ ಇತ್ತ ಸಿದ್ದರಾಮಯ್ಯ ಸ್ಟ್ರಾಂಗ್ ಆಗಿದ್ದಾರೆ. ಇಷ್ಟು ದಿನ ರಾಹುಲ್ ಗಾಂಧಿ ಮಾತನ್ನು ಸಿದ್ದರಾಮಯ್ಯ ಕೇಳುತ್ತಿದ್ದರು. ಈಗ ಸಿದ್ದರಾಮಯ್ಯ ಮಾತನ್ನು ರಾಹುಲ್ ಗಾಂಧಿ ಕೇಳುವಂತಾಗಲಿದೆ. ರಾಹುಲ್ ಗಾಂಧಿಯನ್ನು ಸಿದ್ದರಾಮಯ್ಯ ಹಾವಾಡಿಗರ ರೀತಿ ಆಡಿಸ್ತಾರೆ. ಆದರೆ ಈ ಫಲಿತಾಂಶ ಕಾಂಗ್ರೆಸ್ ಹೈಕಮಾಂಡ್‌ಗೆ ಶಾಕ್ ಕೊಟ್ಟಿದೆ. ಸಿದ್ದರಾಮಯ್ಯಗೆ ಶುಕ್ರದೆಸೆ



ಶುರುವಾಗಿದೆ. ರಾಜ್ಯದಲ್ಲಿ ಡಿಕೆಶಿ ಅಂದುಕೊಂಡಂತೆ ಬದಲಾವಣೆ ಆಗಲ್ಲ ಎಂದು ಹೇಳಿದರು.

ವೋಟ್ ಚೋರಿ ಕಾಂಗ್ರೆಸ್‌ನ ಬ್ರಾಂಡ್ ಆಗಿತ್ತು. ಆದರೆ ಈಗ ಅದು ಫೇಲ್ ಆಗಿದೆ. ವೋಟ್ ಚೋರಿ ಬೋಗಸ್ ಅಂತ ಬಿಹಾರದ ಜನತೆ ತಿರಸ್ಕರಿಸಿದ್ದಾರೆ. ಸೋತ ಮೇಲೆ ಮತಚೋರಿ ಅಂತ

ಪುಟ 2ಕ್ಕೆ

### ಕಾಂಗ್ರೆಸ್ ಗೆದ್ದರೆ ಪ್ರಜಾಪ್ರಭುತ್ವ ನಾವು ಗೆದ್ದರೆ ಮತಗಳ್ಳತನವೇ?

**▸▸ ರಾಹುಲ್ ಗಾಂದಿ ಹಿಟ್ & ರನ್ ಟೀಂ: ಕರಂದ್ಲಾಜೆ ವಾಗ್ದಾಳಿ**

**ಬೆಂಗಳೂರು:** ಕಾಂಗ್ರೆಸ್ ಗೆದ್ದರೆ ಅದು ಪ್ರಜಾಪ್ರಭುತ್ವದ ಗೆಲುವು. ಆಗ ಮತಗಳ್ಳತನದ ಪ್ರಶ್ನೆ ಇಲ್ಲ. ಆದರೆ ನಾವು ಗೆದ್ದಾಗ ಮಾತ್ರ ಮತಗಳ್ಳತನ. ರಾಹುಲ್ ಗಾಂದಿ ಅವರದ್ದು ಹಿಟ್ & ರನ್ ಟೀಂ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ



ಪುಟ 2ಕ್ಕೆ

# ಮಾಹಿತಿ ಆಯೋಗಕ್ಕೆ 35009 ಮೇಲ್ಮನವಿಗಳು ಸಲ್ಲಿಕೆ

**ಚಾಮರಾಜನಗರ ಜಿಲ್ಲೆಯಿಂದ 614 ಮೇಲ್ಮನವಿ–ರಾಜ್ಯ ಮಾಹಿತಿ ಆಯೋಗದ ಆಯುಕ್ತರಿಂದ ಮಾಹಿತಿ**

ಚಾಮರಾಜನಗರ, ಹಕ್ಕು ಕಾಯ್ದೆಯಡಿ ಮಾಹಿತಿ ಆಯೋಗಕ್ಕೆ ರಾಜ್ಯದ ವಿವಿಧ ಕಡೆಗಳಿಂದ 35,009 ಹಾಗೂ ಚಾಮರಾಜನಗರ ಜಿಲ್ಲೆಯಿಂದ 614 ಮೇಲ್ಮನವಿಗಳು ಸಲ್ಲಿಕೆಯಾಗಿವೆ ಎಂದು ರಾಜ್ಯ ಮಾಹಿತಿ ಆಯೋಗದ ಆಯುಕ್ತರಾದ ಕೆ. ಬದ್ರುದ್ದೀನ್ ಹಾಗೂ ಡಾ. ಹರೀಶ್ ಕುಮಾರ್ ಅವರು ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಮಾಹಿತಿ ಆಯುಕ್ತರು ಚಾಮರಾಜನಗರ ಜಿಲ್ಲೆಯಿಂದ ಸಲ್ಲಿಕೆಯಾಗಿರುವ 614 ಮೇಲ್ಮನವಿಗಳಲ್ಲಿ ಗ್ರಾಮೀಣಾಭಿವೃದ್ಧಿ ಪಂಚಾಯುತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ 249, ಕಂದಾಯ ಇಲಾಖೆ 105, ಕೃಷಿ ಇಲಾಖೆ 46, ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ 37 ಇವೆ. ಇವುಗಳ ವಿಲೇವಾರಿಗೆ ಮಾಹಿತಿ ಆಯೋಗ ಕ್ರಮವಹಿಸಿದೆ ಎಂದರು.

ನಾವು ಆಯೋಗದ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡಾಗ 55,400 ಮೇಲ್ಮನವಿಗಳು ನಮ್ಮ ಮುಂದಿದ್ದವು. ಅವುಗಳಲ್ಲಿ 20 ಸಾವಿರ ಮೇಲ್ಮನವಿಗಳನ್ನು ವಿಲೇವಾರಿ ಮಾಡಿದ್ದೇವೆ. ಉಳಿದ 35 ಸಾವಿರ ಮೇಲ್ಮನವಿಗಳ ವಿಲೇವಾರಿ ಮಾಡಲಾಗುತ್ತಿದೆ ಎಂದರು.

ಮಾಹಿತಿ ಹಕ್ಕು ಕಾಯ್ದೆ ಕುರಿತು ಅಧಿಕಾರಿಗಳಿಗೆ ಮತ್ತಷ್ಟು ಅರಿವು ಮೂಡಿಸಲು ಆಯೋಗವು ರಾಜ್ಯಾದ್ಯಂತ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುತ್ತಿದೆ. ಇಲ್ಲಿಯ ತನಕ 16 ಜಿಲ್ಲೆಗಳಲ್ಲಿ ಕಾರ್ಯಗಾರ ನಡೆಸಲಾಗಿದೆ. ಚಾಮರಾಜನಗರ ಜಿಲ್ಲೆಯು 17 ನೇಯದ್ದಾಗಿದೆ. ಕಾಯ್ದೆ ಬಗೆಗಿನ ವ್ಯಾಪಕ ಜಾಗೃತಿ, ಸಾರ್ವಜನಿಕ ಪ್ರಾಧಿಕಾರಗಳ ಹೊಣೆಗಾರಿಕೆ, ಅಧಿಕಾರಿಗಳಿಗಿರುವ ಗೊಂದಲಗಳನ್ನು ಸರಿಪಡಿಸುವುದು ಕಾರ್ಯಾಗಾರದ ಮುಖ್ಯ ಉದ್ದೇಶವಾಗಿದೆ ಎಂದು ಅವರು ತಿಳಿಸಿದರು.

ಆಡಳಿತದಲ್ಲಿ ಪಾರದರ್ಶಕತೆ, ಉತ್ತರದಾಯಿತ್ವ ತರಲು ಹಾಗೂ ಜನರು ಪ್ರಶ್ನೆ ಮಾಡಲು ಅವಕಾಶ ನೀಡಲು 20 ವರ್ಷಗಳ ಹಿಂದೆ ಮಾಹಿತಿ ಹಕ್ಕು ಕಾಯ್ದೆ ಜಾರಿಗೊಳಿಸಲಾಗಿದೆ. ಕಾಯ್ದೆಯು ಉತ್ತಮವಾಗಿದ್ದು ಸಾರ್ವಜನಿಕ ಹಿತಾಸಕ್ತಿ, ಸದುದ್ದೇಶದಿಂದ ಮಾಹಿತಿ ಕೋರಿ ಅರ್ಜಿ ಸಲ್ಲಿಸಬೇಕು. ಕಾಯ್ದೆಯನ್ನು ದುರ್ಬಳಕೆ ಮಾಡಲು ಅವಕಾಶವಿಲ್ಲ ಎಂದರು. ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಉಪ ವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ ಅವರು ಪತ್ರಿಕಾಗೋಷ್ಠಿಯಲ್ಲಿ ಇದ್ದರು.



# 17ರಿಂದ ಕಬ್ಬಾಳಮ್ಮ ಯಡಗೊಂಡ

ರಾಮನಗರ: ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ವತಿಯಿಂದ ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರ ತಾಲ್ಲೂಕಿನ ಸಾತನೂರು ಹೋಬಳಿಯ ಕಬ್ಬಾಳು ಗ್ರಾಮದಲ್ಲಿ ಭಕ್ತರ ಕೋರಿಕೆಯನ್ನು ಈಡೇರಿಸಲು ನೆಲೆಸಿರುವ ಶ್ರೀ ಕಬ್ಬಾಳಮ್ಮನವರ ಯಡಗೊಂಡ ಆಯೋಜಿಸಲಾಗಿದೆ. ನ.17ರ ಸೋಮವಾರ ಯಳವಾರ ಮತ್ತು ನ.18ರ ಮಂಗಳವಾರ ಬೆಳಿಗ್ಗೆ 6.30 ರಿಂದ 7:15ಕ್ಕೆ ಯಡಗೊಂಡೋತ್ಸವ ಆಯೋಜಿಸಲಾಗಿದೆ ಎಂದು ಕಬ್ಬಾಳಮ್ಮ ದೇವಾಲಯದ ಪ್ರಕಟಣೆ ತಿಳಿಸಿದೆ.

# ನೀರು ಸರಬರಾಜಿನಲ್ಲಿ ವ್ಯತ್ಯಯ

ರಾಮನಗರ: ಚನ್ನಪಟ್ಟಣ ನಗರಕ್ಕೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಕುಡಿಯುವ ನೀರು ಸರಬರಾಜು ನಿರ್ವಹಣೆ ಮಾಡಲಾಗುತ್ತಿದೆ. ತುರ್ತು ನಿರ್ವಹಣೆ ಕಾಮಗಾರಿ ಕೈಗೊಂಡಿರುವ ಪ್ರಯುಕ್ತ ಚನ್ನಪಟ್ಟಣ ನಗರಕ್ಕೆ ನ.17 ಮತ್ತು 18ರಂದು ಎರಡು ದಿನಗಳು ಕಾವೇರಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುತ್ತದೆ. ಆದ್ದರಿಂದ ಸಾರ್ವಜನಿಕರು ನಗರಸಭೆ ಮತ್ತು ಜಲ ಮಂಡಳಿರವರೊಂದಿಗೆ ಸಹಕರಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೊದಲ ಪುಟದಿಂದ

# ನಾವು ಗೆದ್ದರೆ ಮತಗಳ್ಳತನವೇ?

ವಾಗ್ದಾಳಿ ನಡೆಸಿದ್ದಾರೆ. ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ಸಿದ್ದರಾಮಯ್ಯನವರೇ ನೀವು 135 ಸೀಟು ಹೇಗೆ ಗೆದ್ದೀದ್ದೀರಿ? ರಾಜಕಾರಣವನ್ನು ರಾಜಕಾರಣವಾಗಿ ಎದುರಿಸಿ. ಓಡಿ ಹೋಗಬೇಡಿ. ರಾಹುಲ್ ಗಾಂಧಿ ಮತ್ತು ನಿಮ್ಮ ಪಕ್ಷದ್ದು ಹಿಟ್ ಆಂಡ್ ರನ್ ಕೇಸ್. ಕಾಂಗ್ರೆಸ್ ಗೆದ್ದಾಗ ಮತಗಳ್ಳತನದ ಪ್ರಶ್ನೆ ಇಲ್ಲ. ತೆಲಂಗಾಣದಲ್ಲಿ ನೀವು ಗೆದ್ದಾಗ ಮತಗಳ್ಳತನ ನಡೆಯಲಿಲ್ಲ. ನಾವು ಗೆದ್ದಾಗ ಮತಗಳ್ಳತನ. ಇದು ರಾಜಕಾರಣವೇ? ಎಂದು ಪ್ರಶ್ನಿಸಿದರು.

## ಆರೋಪ ಚುನಾವಣೆ ತಂತ್ರ

ಗ್ಯಾರಂಟಿಗೂ ಜನರ ಹಿತಕ್ಕಾಗಿ ಯೋಜನೆ ರೂಪಿಸುವುದಕ್ಕೂ ವ್ಯತ್ಯಾಸ ಇದೆ. ಹಣಕಾಸಿನ ಮಿತಿಯಲ್ಲಿ ಯೋಜನೆ ರೂಪಿಸಿದರೆ ಒಳ್ಳೆಯದು. ಹಣಕಾಸಿನ ಸಾಮರ್ಥ್ಯ ಇಲ್ಲದಿದ್ದರೂ ರಾಜ್ಯ ಸರ್ಕಾರ ಯೋಜನೆಗಳನ್ನು ಮಾಡಿದೆ. ಹೀಗಾಗಿ, ಗ್ಯಾರಂಟಿಗೆ ಹಣ ಹೊಂದಿಸಲಾಗದ ಪರಿಸ್ಥಿತಿಗೆ ಸರ್ಕಾರ ತಲುಪಿದೆ ಎಂದು ಅವರು ಟೀಕಿಸಿದರು.

## ಸಿದ್ದು ಸರ್ಕಾರದಲ್ಲೂ ಭ್ರಷ್ಟಾಚಾರ

ನೀಡಲು ಸರ್ಕಾರದ ಬಳಿ ಹಣವಿಲ್ಲ. ದೇಶದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲ ಎಂದು ದೂರಿದರು. ಲಂಚ ತೆಗೆದುಕೊಂಡು ಸಿಕ್ಕಾಕೊಂಡರೆ ಕೋರ್ಟ್ನಿಂದ ಶಿಕ್ಷೆಯಾಗಲು 30 ವರ್ಷಗಳಾಗುತ್ತವೆ. ಅದಕ್ಕೆ ಯಾರೂ ಕಾನೂನಿಗೆ ಹೆದರಲ್ಲ. ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯವಿಲ್ಲ, ನಿಯಂತ್ರಣ ಮಾಡಬಹುದು ಅಷ್ಟೆ ಎಂದು ವಿಷಾದಿಸಿದರು. ವೋಟ್ ಚೋರಿ ಮಾಡುವುದು ಅಷ್ಟು ಸುಲಭವಿಲ್ಲ. ವಿಚಾರಣೆ ಮಾಡಲು ಸಾಧ್ಯವಿಲ್ಲ ಅಂತ ಕೋರ್ಟ್ ಹೇಳಿದೆ. ಬಾಯಿಗೆ ಬಂದಾಗೆ ಹೇಳ್ತಾರೆ. ಸೋತಿದ್ದಕ್ಕೆ ಕಾರಣ ಕೊಡುತ್ತಾರಷ್ಟೆ ಎಂದು ಹೇಳಿದರು.

# ಮೇಕೆದಾಟು ಯೋಜನೆ ಜಾರಿಗೆ ಮುಂದಾಗಿ

ಮೈಸೂರು: ಮೇಕೆದಾಟು ಯೋಜನೆ ಕುರಿತಂತೆ ಸುಪ್ರೀಂಕೋರ್ಟ್ ತೀರ್ಪು ಸ್ವಾಗತಾರ್ಹವಾಗಿದೆ. ಹೀಗಾಗಿ ಕೇಂದ್ರ ಸರ್ಕಾರದ ನೆರವು ಪಡೆದು ರಾಜ್ಯ ಸರ್ಕಾರ ಯೋಜನೆ ಜಾರಿಗೆ ಕೂಡಲೇ ಮುಂದಾಗಬೇಕೆಂದು ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್. ಜಯಪ್ರಕಾಶ್ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ರಾಜ್ಯದಲ್ಲಿ ಮೇಕೆ ದಾಟು ಯೋಜನೆ ಬಗ್ಗೆ ಬಹಳಷ್ಟು ವರ್ಷಗಳಿಂದ ಚರ್ಚೆ ಆಗುತ್ತಿದೆ. ಆದರೆ ನೆರೆಯ ತಮಿಳು ನಾಡು ಸರ್ಕಾರ ಕಾವೇರಿ ನೀರಿಗೆ ಸಂಬಂಧಿಸಿದಂತೆ ಪದೇ ಪದೇ ಕ್ಯಾತೆ ತೆಗೆಯುವುದಲ್ಲದೆ, ಕಾವೇರಿ ಯೋಜನೆಗಳಿಗೆ ಅಡ್ಡಗಾಲು ಹಾಕುತ್ತಿದೆ. ಹೀಗಿರುವಾಗ ಸುಪ್ರೀಂ ಕೋರ್ಟ್ ತೀರ್ಪು ರಾಜ್ಯಕ್ಕೆ ಅನುಕೂಲಕರವಾಗಿದೆ ಎಂದರು.

**▶▶ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್. ಜಯಪ್ರಕಾಶ್ ಆಗ್ರಹ**

ಈ ಹಿಂದೆ ತಮಿಳುನಾಡಿಗೆ 177 ಟಿಎಂಸಿ ನೀರು ಬಿಡಬೇಕೆಂದು ಪ್ರಾಧಿಕಾರ ಆದೇಶ ನೀಡಿದ ಬಳಿಕ ಕಾವೇರಿ ಹೋರಾಟ ತಣ್ಣಗಾಯಿತು. ಆದೇಶ ಬಂದ ಮೇಲೆ ನಾವು ಏನನ್ನೂ ಮಾಡಲಾಗದು ಎಂದು ಸುಮ್ಮನಾದರು. ಇದು ಸರಿಯಲ್ಲ. ಪ್ರಾಧಿಕಾರದ ಪುನಾರಚನೆಗಾಗಿ, ಮೇಕೆ ದಾಟು ಯೋಜನೆ ಪ್ರಾರಂಭಕ್ಕಾಗಿ ಈಗಲೂ ಹೋರಾಟ ನಡೆಸಬೇಕೆಂದು ಮನವಿ ಮಾಡಿದರು.

ಅಲ್ಲದೆ, ಕೆಲ ತಿಂಗಳ ಹಿಂದೆ ಕಾವೇರಿ ನೀರಿಗಾಗಿ ಕ್ರಿಯಾ ಸಮಿತಿ ಹೋರಾಟ ಮಾಡಿದಾಗ ಯಾವೊಬ್ಬ ಜನಪ್ರತಿನಿಧಿಯೂ ಸೌಜನ್ಯಕ್ಕಾದರೂ ಆಗಮಿಸಿ ಬೆಂಬಲ ಸೂಚಿಸದಿರುವುದು ಬೇಸರದ ಸಂಗತಿಯಾಗಿದೆ. ಹೀಗಾಗಿ ಈಗಲೂ ಕಾಲ ಮಿಂಚಿಲ್ಲ, ರಾಜ್ಯದ ಎಲ್ಲ ಸಂಸದರು, ಜನಪ್ರತಿನಿಧಿಗಳು ಈ ನಿಟ್ಟಿನಲ್ಲಿ ಕಾವೇರಿ ನದಿ ನೀರು ಉಳಿಸಿಕೊಳ್ಳಲು ಹೋರಾಟ ಮಾಡಬೇಕು, ಕೇಂದ್ರದ ಮೇಲೆ ಒತ್ತಡ ಹೇರಬೇಕೆಂದು ಆಗ್ರಹಿಸಿದರು.

ತೇಜೇಸ್ ಲೋಕೇಶ್‌ಗೌಡ, ಮೂಗೂರು ನಂಜುಂಡಸ್ವಾಮಿ, ಸಿಂಧುವಳ್ಳಿ ಶಿವಕುಮಾರ್, ಹೊನ್ನೇಗೌಡ, ಕೃಷ್ಣಪ್ಪ ಹಾಜರಿದ್ದರು.

# ಸಾವಿರ ದೀಪ ಬೆಳಗಿಸುವ ಕಾರ್ತಿಕ ಹಬ್ಬ



ಹನೂರು: ಮೂರನೇ ಕಾರ್ತಿಕ ಮಾಸದ ಪ್ರಯುಕ್ತ ಬಂಡಳ್ಳಿ ಗ್ರಾಮದಲ್ಲಿ ಅತ್ಯಂತ ವಿಜ್ರಂಬಣೆಯಿಂದ ಕಂಡಾಯ ಉತ್ಸವ ಮೆರವಣಿಗೆ ಜೊತೆಗೆ ಸಾವಿರದ ಒಂದು ದೀಪ ಬೆಳಗಿಸುವ ಮೂಲಕ ಕಾರ್ತಿಕ ಹಬ್ಬ ನಡೆಯಿತು.

ತಾಲೂಕಿನ ಬಂಡಳ್ಳಿ ಗ್ರಾಮದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಸಹ ಕಾರ್ತಿಕ ಮಾಸದ ಮೂರನೇ ಕಾರ್ತಿಕ ಶುಕ್ರವಾರದಂದು ಕಂಡಾಯ ಮೆರವಣಿಗೆ ನಡೆ ಯುವುದು ವಾಡಿಕೆ. ಅದರಂತೆ ಮೂರನೇ ಶುಕ್ರವಾರ ಬೆಳಿಗ್ಗೆ ಕಂಡಾಯಗಳ ಉತ್ಸವ ಅತ್ಯಂತ ವಿಜೃಂಭಣೆಯಿಂದ ಜರುಗಿತು.

**ತಳಿರು ತೋರಣಗಳಿಂದ ಅಲಂಕೃತ**

ಕಾರ್ತಿಕ ಹಬ್ಬ ಎಂದೇ ಖ್ಯಾತಿಯಾಗಿರುವ ಬಂಡಳ್ಳಿ ಗ್ರಾಮದಲ್ಲಿ ಇಡೀ ಗ್ರಾಮವೇ ಹಸಿರು ತೋರಣ ತಳಿರುಗಳಿಂದ ಹಾಗೂ ಬಣ್ಣ ಬಣ್ಣದ ಚಿತ್ತಾರ ಮೂಡುವ ಪತಾಕೆಗಳಿಂದ ಇಡೀ ಗ್ರಾಮದಲ್ಲೇ ಆವರಿಸಿ ಹಬ್ಬದ ವಾತಾವರಣಕ್ಕೆ ಮತ್ತಷ್ಟು ಮೆರುಗನ್ನು ತಂದು ಕೊಟ್ಟಿತು. ಬಾಳೆ ಕಂಬ ಹಾಗೂ ಮಾವಿನ ಸೊಪ್ಪು ಹೀಗೆ ಪ್ರತಿ ಬೀದಿಯಲ್ಲಿ ಸಹ ರಾರಾಜಿಸುತ್ತಿತ್ತು.

**ವಿದ್ಯುತ್ ಅಲಂಕಾರ ವೈಭವ**

ಕಾರ್ತಿಕ ಹಬ್ಬದ ಪ್ರಯುಕ್ತ ಇಡೀ ಗ್ರಾಮಕ್ಕೆ ವಿದ್ಯುತ್ ಅಲಂಕಾರಗಳಿಂದ ದೀಪಾಲಂಕಾರ ಮಾಡಿದ್ದು ನೋಡುಗರ ಕಣ್ಮನ ಸೆಳೆಯುವಂತಿತ್ತು. ಬಂಡಳ್ಳಿ ಗ್ರಾಮದ ಉದ್ದಗಲಕ್ಕೂ ಸಹ ವಿದ್ಯುತ್ ದೀಪ ಅಲಂಕಾರಗಳಿಂದ ವಿಜೃಂಭಣೆಯಿಂದ ಅಲಂಕಾರ ಮಾಡಲಾಗಿತ್ತು.

**ತಾಳಕ್ಕೆ ಕುಣಿದು ಕುಪ್ಪಳಿಸಿದ ಯುವಕರು**

ಕಂಡಾಯ ಉತ್ಸವದ ಮೆರವಣಿಗೆ ವೇಳೆ ಇಡೀ ಗ್ರಾಮದ ಉದ್ದಕ್ಕೂ ಸಹ ಗ್ರಾಮದ ಯುವಕರು ವಾದ್ಯ ಮೇಳಗಳ ತಾಳಕ್ಕೆ ತಕ್ಕಂತೆ ತಾಳ ಹಾಕುವ ಮೂಲಕ ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. ಯುವಕರು ಮಹಿಳೆಯರು ಯಜಮಾನರು ಮಕ್ಕಳು ಎಂಬ ಭೇದಭಾವವಿಲ್ಲದೆ ಎಲ್ಲರೂ ಸಹ ಶ್ರೀ ಸಿದ್ದಪ್ಪಾಜಿಯ ಕೃಪೆಗೆ ಪಾತ್ರರಾಗುವಂತೆ ಕುಣಿದು ಕುಪ್ಪಳಿಸಿ ಸಂಭ್ರಮ ಪಟ್ಟರು. ಯಜಮಾನರಾದ ಲಿಂಗರಾಜು ತಮ್ಮಯ್ಯ ರಾಜು, ಮರಿ ಸ್ವಾಮಿ, ಶಿವ ಸ್ವಾಮಿ, ಮರಿಸ್ವಾಮಿ (ಶಿವಪುರ), ಹುಚ್ಚರಯ್ಯ, ಶಿವಮಲ್ಲು, ಕೆಲ್ಲಪ್ಪ, ಗ್ರಾಮ ಪಂಚಾಯತಿ ಸದಸ್ಯರಾದ ನಾಗಯ್ಯ, ಮುಖಂಡರಾದ ಸಿದ್ದರಾಜು, ವಿವಿಧ ಗ್ರಾಮದ ಮುಖಂಡರು ವಿದ್ಯಾರ್ಥಿಗಳು ಗ್ರಾಮಸ್ಥರು ಇದ್ದಾರು

# ಅಯ್ಯಪ್ಪನ ಭಕ್ತರಿಗೆ ಉಚಿತ ಅಂಬುಲೆನ್ಸ್ ಅನಾವರಣ




ಮೈಸೂರು: ಕರ್ನಾಟಕದಿಂದ ಕೇರಳ ರಾಜ್ಯಕ್ಕೆ ತೆರಳುವ ಶಬರಿಮಲೆ ಅಯ್ಯಪ್ಪ ಸ್ವಾಮಿ ಭಕ್ತರಿಗಾಗಿ ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲೂಕಿನ ಚಿಕ್ಕಕೊಪ್ಪಲು ಗ್ರಾಮದ ಡಿ ಪುನೀತ್ ಅಭಿಮಾನಿ ಬಳಗದ ವತಿಯಿಂದ ಶಬರಿಮಲೆಯಲ್ಲಿ ಕಾಣೆಯಾದವರು, ಅನಾರೋಗ್ಯಕ್ಕೆ ತುತ್ತಾದವರು ಹಾಗೂ ವಾಹನ ತೊಂದರೆಗೀಡಾದವರ ಸಹಾಯಕ್ಕಾಗಿ ಡಾ.ಪುನೀತ್ ರಾಜ್ ಕುಮಾರ್ ಸಂಸ್ಮರಣಾ ಸೇವಾ ರಥಕ್ಕೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ ಚಾಲನೆ ನೀಡಿದರು.

ಮೈಸೂರಿನ ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂದೆ ವಿಶೇಷ ಪೂಜೆ ಸಲ್ಲಿಸಲಾಯಿತು. ಕನ್ನಡದ ಬಾವುಟ ತೋರಿಸುವ ಮೂಲಕ ವಿಶೇಷ ಆಂಬುಲೆನ್ಸ್ ಗೆ ಚಾಲನೆ ನೀಡಿದ ಸಂಸದರಾದ ಯದುವೀರ್ ಶುಭ ಕೋರಿದರು. ಬಳಿಕ ಮಾತನಾಡಿ ಪ್ರತಿ ವರ್ಷ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಕೇರಳದ ಅಯ್ಯಪ್ಪನ ಸನ್ನಿಧಿಗೆ ಕರ್ನಾಟಕ ರಾಜ್ಯ ಸೇರಿ ದೇಶಾದ್ಯಂತ ಕೋಟ್ಯಂತರ ಭಕ್ತರು ಬರುತ್ತಾರೆ. ಅಂತಹ ಸಂದರ್ಭದಲ್ಲಿ ವ್ಯತಿರಿಕ್ತ ವಾತಾವರಣದಿಂದಾಗಿ ಕೆಲವರಿಗೆ ಅನಾರೋಗ್ಯದ ಸಮಸ್ಯೆ ಕಾಡುತ್ತದೆ. ಕೆಲವು ಮಕ್ಕಳು ಹಾಗೂ ವಯಸ್ಸಾದವರು ಕೂಡ ಕಾಣೆಯಾಗುತ್ತಾರೆ. ವಾಹನಗಳು ಕೂಡ ಕೆಟ್ಟು ನಿಲ್ಲುತ್ತವೆ, ಇಂತಹ ಸಂದರ್ಭದಲ್ಲಿ ಅವರ ಅನುಕೂಲಕ್ಕಾಗಿ ಉಚಿತವಾಗಿ ಸೇವೆ ನೀಡಲು ಮುಂದಾಗಿರುವ ಕೆಆರ್ ನಗರ ತಾಲೂಕಿನ ಚಿಕ್ಕಕೊಪ್ಪಲು ಗ್ರಾಮದ ಡಿ.ಪುನೀತ್ ಮತ್ತು ಅಭಿಮಾನಿ ಬಳಗದ ವತಿಯಿಂದ ಈ ರೀತಿಯ ಒಳ್ಳೆಯ ಕೆಲಸ ಮಾಡಿರುವುದು ನಿಜಕ್ಕೂ ಶ್ಲಾಘನೀಯ. ಎರಡು ಟೋಲ್ ಫ್ರೀ ನಂಬರ್ ನೀಡಿದ್ದು ಅದರ ಮೂಲಕ ಸಮಸ್ಯೆ ಇದ್ದವರು ಈ ವಾಹನವನ್ನು ಸಂಪರ್ಕಿಸಿ ಎಂದರು.


ವಾಹನದ ಅವಶ್ಯಕತೆಗೆ ಸಹಾಯವಾಣಿ ಮೊ.8277536622, 9845230909 ಸಂಪರ್ಕಿಸಬಹುದಾಗಿದೆ. ಶಾಸಕ ಶಿವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ, ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ದಿನೇಶ್ ಗೌಡ, ಕಿರಣ್ ಗೌಡ, ಬಿ.ಎಂ.ರಘು, ಡಿ.ಪುನೀತ್ ಅಭಿಮಾನಿ ಬಳಗದ ಸದಸ್ಯರಾದ ಪುಟ್ಟುಬುದ್ಧಿ, ರವಿ ಬೆಳ್ಳಯ್ಯ, ಗಜೇಂದ್ರ, ರಾಮು, ಮಂಜುನಾಥ್, ಅನಿಲ್, ಅರ್ಜುನ್, ಕಿರಣ್, ಪವನ್, ಶರತ್, ರಾಮಣ್ಣ, ಸೋಮು, ಮಂಜು ಸೇರಿ ಇತರರು ಉಪಸ್ಥಿತರಿದ್ದರು.

# ಸಾರ್ವಜನಿಕ ಗ್ರಂಥಾಲಯದಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ

ಕೆ.ಆರ್.ಪೇಟೆ: ಪಟ್ಟಣದ ಪುರಸಭಾ ವಾಣಿಜ್ಯ ಕಟ್ಟಡದಲ್ಲಿರುವ ಸಾರ್ವಜನಿಕ ಗ್ರಂಥಾಲಯ ಕೇಂದ್ರದಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಅಗ್ರಹಾರಬಾಚಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಹಿರಿಯ ಪತ್ರಕರ್ತರಾದ ಆರ್.ಶ್ರೀನಿವಾಸ್ ಅವರು ಗ್ರಂಥಾಲಯ ಸಪ್ತಾಹ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಗ್ರಂಥಾಲಯ ವಿಜ್ಞಾನದ ಪಿತಾಮಹ ಡಾ. ಎಸ್. ಆರ್.ರಂಗನಾಥನ್ ಅವರ ಭಾವಪುತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ಗ್ರಂಥಾಲಯ ಸಪ್ತಾಹದ ಅಂಗವಾಗಿ ವಾರವಿಡೀ ಪುಸ್ತಕ ಪ್ರದರ್ಶನ, ದಿನಪತ್ರಿಕೆಗಳು, ವಾರಪತ್ರಿಕೆಗಳ ಪ್ರದರ್ಶನ, ಗ್ರಂಥಾಲಯ ಕುರಿತು ಉಪನ್ಯಾಸಗಳು ಮತ್ತು ಸ್ಪರ್ಧೆಗಳಂತಹ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಓದುವ ಹವ್ಯಾಸವನ್ನು ಬೆಳೆಸುವುದು ಸಪ್ತಾಹದ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು. ಗ್ರಂಥಾಲಯ ಸಪ್ತಾಹವನ್ನು ಪ್ರತಿ ವರ್ಷ ನವೆಂಬರ್ 14 ರಿಂದ 20 ರವರೆಗೆ ಆಚರಿಸಲಾಗುತ್ತದೆ. ಈ ಸಪ್ತಾಹವನ್ನು ಓದುವ ಸಂಸ್ಕೃತಿಯನ್ನು ಉತ್ತೇಜಿಸಲು ಮತ್ತು ಗ್ರಂಥಾಲಯಗಳ ಮಹತ್ವವನ್ನು ಸಾರ್ವಜನಿಕರಿಗೆ ತಿಳಿಸುವುದು. ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಓದುವ ಹವ್ಯಾಸವನ್ನು ಬೆಳೆಸುವುದು. ಗ್ರಂಥಾಲಯ ಸಪ್ತಾಹದ ಮುಖ್ಯ ಉದ್ದೇಶವಾಗಿದೆ. ಓದುಗರು ಗ್ರಂಥಾಲಯವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ನಿತ್ಯ ಕನಿಷ್ಠ 1ಗಂಟೆ ಗ್ರಂಥಾಲಯದಲ್ಲಿ ಓದುವ ಅಭ್ಯಾಸ ಮಾಡಿಕೊಂಡರೆ ಉತ್ತಮ ಜ್ಞಾನಾರ್ಜನೆ ಪಡೆದುಕೊಳ್ಳಬಹುದು. ನಿರುದ್ಯೋಗಿಗಳು ದುಶ್ಚಟಗಳಿಂದ ದೂರವಿದ್ದು ನಿತ್ಯ ದಿನ ಪತ್ರಿಕೆ ಓದುವ ಹವ್ಯಾಸ ಇದ್ದರೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಸುಲಭವಾಗಿ ಎದುರಿಸಿ ಯಶಸ್ಸು ಗಳಿಸಬಹುದು. ಗ್ರಂಥಾಲಯಗಳು ಸಮುದಾಯಗಳನ್ನು ಬಲಪಡಿಸುವಲ್ಲಿ ಮತ್ತು ಜೀವನವನ್ನು ಪರಿವರ್ತಿಸುವಲ್ಲಿ ಹೆಚ್ಚು ಸಹಕಾರಿಯಾಗುತ್ತವೆ. ಗ್ರಂಥಪಾಲಕರು ಓದುಗರಿಗೆ ಮಾರ್ಗದರ್ಶಕರಾಗಿ ಕೆಲಸ ನಿರ್ವಹಿಸುವ ಮೂಲಕ ಓದುಗರ ಅಭಿರುಚಿಯನ್ನು ಹೆಚ್ಚಿಸುವ ಜೊತೆಗೆ ಅವರ ಜೀವನ ರೂಪಿಸಿಕೊಳ್ಳಲು ಸಹಕಾರಿಯಾಗಬೇಕು ಎಂದು ಶ್ರೀನಿವಾಸ್ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಕೇಂದ್ರ ಗ್ರಂಥಾಲಯದ ಗ್ರಂಥಪಾಲಕಿ ಕಲ್ಪನಾ, ಗ್ರಂಥಾಲಯ ಸಹಾಯಕ ಲಕ್ಷ್ಮೀ ಪುರ ಚಂದ್ರು, ಉಪನ್ಯಾಸಕ ಚರಿತ್ರೆ ಕುಮಾರ್, ಗ್ರಾ.ಪಂ.ಸದಸ್ಯ ಹಿರಳಹಳ್ಳಿ ಕುಮಾರಸ್ವಾಮಿ, ಪತ್ರಕರ್ತ ರಂಗನಾಥ್ ಸೇರಿದಂತೆ ಹಲವಾರು ಓದುಗರು ಉಪಸ್ಥಿತರಿದ್ದರು.




ಮೊದಲ ಪುಟದಿಂದ

# 'ಮರಳಿ ಮಣ್ಣಿಗೆ' ವೃಕ್ಷ ಮಾತೆ

ಕೊನೆಯುಸಿರೆಳೆದರು. ತಿಮ್ಮಕ್ಕನವರು ತಮಗೆ ಮಕ್ಕಳಿಲ್ಲದ ಕಾರಣಕ್ಕೆ ರಸ್ತೆಯ ಬದಿಯಲ್ಲಿ ಆಲದ ಸಸಿಗಳನ್ನು ನೆಟ್ಟು ಅವುಗಳನ್ನೇ ಮಕ್ಕಳಂತೆ ಭಾವಿಸಿ ಬೆಳೆಸಿದ ಅಪ್ರತಿಮ ಪರಿಸರವಾದಿ. ಪರಿಸರ ಸಂರಕ್ಷಣೆಯಲ್ಲಿ ಮಹತ್ತರ ಕಾರ್ಯ ಮಾಡಿದ್ದ ಹಿನ್ನೆಲೆಯಲ್ಲಿ ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದರು.

## ರಾಗಾಗೆ ರಾಹುಕಾಲ

ಕಾಂಗ್ರೆಸ್ ನಾಯಕರು ಡೈಲಾಗ್ ಹೊಡೆಯುತ್ತಾರೆ. ಈಗ ಈ ಡೈಲಾಗ್ ಅನ್ನು ಜನ ನಂಬಲ್ಲ ಎಂದರು. ಬಿಹಾರದ ಜನತೆ ಕಾಂಗ್ರೆಸ್ಸನ್ನು ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ಪಾಕಿಸ್ತಾನದಿಂದ, ಬಾಂಗ್ಲಾದಿಂದ ಬಂದವರು, ಸತ್ತು ಹೋದವರು, ಎರಡು ಹೆಸರು ಇದ್ದ ಮತಗಳನ್ನು ರದ್ದು ಮಾಡಿದ್ದಾರೆ. ಇದರಲ್ಲಿ ತಪ್ಪೇನು? ಸಮಸ್ಯೆ ಇದ್ದಲ್ಲಿ ಅವತ್ತೇ ನಿಮ್ಮ ಏಜೆಂಟ್ ಅದನ್ನು ಪ್ರಶ್ನಿಸಬೇಕಿತ್ತಲ್ಲವೇ ಎಂದರು. ಕಾಂಗ್ರೆಸ್‌ಗೆ ರಾಜ್ಯದಲ್ಲೂ ಎರಡೇ ವರ್ಷ ಇರೋದು. ಅಲ್ಲೀವರೆಗೂ ಏನೇನು ಮಾಡ್ತೀರೋ ಮಾಡಿ. ವೋಟ್ ಚೋರಿ ಆರೋಪಕ್ಕೆ ಜನರಿಗೆ ಕ್ಷಮೆ ಕೇಳಲಿ ಎಂದರು.

# 28 ಕೃಷ್ಣಮೃಗಗಳು ಸಾವು

ಮೊದಲ ದಿನ 20 ಕೃಷ್ಣಮೃಗಗಳು ಸಾವನ್ನಪ್ಪಿದ್ದರೆ, ಎರಡನೇ ದಿನ 8 ಕೃಷ್ಣಮೃಗಗಳು ಸಾವನ್ನಪ್ಪಿವೆ. ಅನುಮಾನಾಸ್ಪದವಾಗಿ ಮೃತಪಟ್ಟ ಕೃಷ್ಣಮೃಗಕ್ಕೆ ಅಂತ್ಯಕ್ರಿಯೆ ನೆರವೇರಿಸಲಾಗಿದೆ. ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಮೃಗಗಳ ಸಾವಿನ ನಿಖರ ಕಾರಣ ಸ್ಪಷ್ಟವಾಗಲಿದೆ. ಸಾವಿನ ಹಿಂದಿನ ಕಾರಣವನ್ನು ಕಂಡುಹಿಡಿಯಲು ಬೆಂಗಳೂರಿನ ಬನ್ನೇರುಘಟ್ಟ ಪ್ರಾಣಿಶಾಸ್ತ್ರ ಉದ್ಯಾನವನದ ಅಧಿಕಾರಿಗಳಿಗೆ ಮಾದರಿಯನ್ನು ಕಳುಹಿಸಿದ್ದೇವೆಂದು ತಿಳಿಸಿದರು.

## ತನಿಖೆಗೆ ಸಚಿವ ಖಂಡ್ರೆ ಸೂಚನೆ

ಮಾತನಾಡಿದ ಅವರು, ಪ್ರಾಥಮಿಕ ವರದಿಗಳ ಪ್ರಕಾರ ಜಿಂಕೆಗಳು ಸಾಂಕ್ರಾಮಿಕ ಕಾಯಿಲೆಯಿಂದ ಮೃತಪಟ್ಟಿವೆ ಎಂದು ತಿಳಿದುಬಂದಿದೆ. ಹೀಗಾಗಿ ಮೃಗಾಲಯದ ಬೇರೆ ಯಾವುದೇ ಪ್ರಾಣಿಗಳಿಗೂ ಸೋಂಕು ತಗುಲದಂತೆ ಮುಂಜಾಗರೂಕತಾ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. ಈ ಜಿಂಕೆಗಳು ಕಲುಷಿತ ನೀರು, ಆಹಾರ ಸೇವಿಸಿ ಕಾಯಿಲೆಗೆ ತುತ್ತಾಗಿ ಮೃತಪಟ್ಟಿವೆಯೇ ಅಥವಾ ಬೆಕ್ಕು ಹಾಗೂ ಇನ್ನಿತರ ಸಾಕು ಪ್ರಾಣಿಗಳಿಂದ ಈ ಕಾಯಿಲೆ ಹರಡಿದೆಯೇ ಎಂಬ ಬಗ್ಗೆ ತಜ್ಞರ ಸಮಿತಿ ರಚಿಸಿ, ತನಿಖೆ ನಡೆಸಿ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ. ಮೃಗಾಲಯದಲ್ಲಿ ಪ್ರಾಣಿಗಳು ಈ ರೀತಿ ಸಾಯುತ್ತಿರುವುದು ಕಳವಳಕಾರಿ ವಿಷಯ. ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸಬಾರದು ಮತ್ತು ಸಿಬ್ಬಂದಿ ನಿರ್ಲಕ್ಷ್ಯದಿಂದ ಸಾವನ್ನಪ್ಪಿದರೆ ನಿಯಮಗಳ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಮೃಗಾಲಯದ ಸಿಬ್ಬಂದಿಯ ನಿರ್ಲಕ್ಷ್ಯದಿಂದ ಅವು ಸಾವನ್ನಪ್ಪಿವೆ ಎಂದು ಕಂಡುಬಂದರೆ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಸಿದರು.\

ಮೊದಲ ಪುಟದಿಂದ

# ಸಿಎಂ, ಡಿಸಿಎಂ ಪ್ರತ್ಯೇಕ ಭೇಟಿ

ಗಂಭೀರವಾಗಿ ಪರಿ ಗಣಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಹಾಗೂ ತೆಲಂಗಾಣದ ಸಿಎಂ ಜತೆ ಚರ್ಚಿಸಿದ್ದಾರೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಮತ್ತಷ್ಟು ಅಭಿವೃದ್ಧಿ ಕೆಲಸ ಮಾಡಿ ಸಂದೇಶ ನೀಡಿದ್ದಾರೆ ಎನ್ನಲಾಗಿದೆ.

**ಹುಣಸೂರು ಯೋಜನಾ ಪ್ರಾಧಿಕಾರ, ಹುಣಸೂರು**
**ಮೊದಲನೇ ಮಹಡಿ, ಎಸ್.ಜೆ.ಆರ್.ವೈ ಕಟ್ಟಡ,**
**ನಗರ ಸಭೆ ಆವರಣ, ಹುಣಸೂರು–571105**
**Gmail.hunsurplanning@gmail.com ದೂ.:08222–295122**
**ಸಂ.ಹು.ಯೋ.ಪ್ರಾ/ದೊ.ಹು.ಗ್ರಾ/ಭೂ.ಉ.ಬ/347/2025–26 ದಿ: 11.11.2025**

**ಸಾರ್ವಜನಿಕ ಪ್ರಕಟಣೆ**

**(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರನ್ವಯ)**

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಹುಣಸೂರು ಗ್ರಾಮದ ಸ.ನಂ:393/1ರಲ್ಲಿ 2ಎ–02ಗುಂ ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಯಲ್ಲಿ ಕೃಷಿ/ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಸದರಿ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಶ್ರೀ.ಹೆಚ್.ಜೆ.ಯೋಗಾನಂದ ಬಿನ್ ಲೇ.ಜವರಯ್ಯ ಇವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

**ಅರ್ಜಿದಾರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿಯು ಈ ಕೆಳಕಂಡಂತಿರುತ್ತದೆ.**
ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಹುಣಸೂರು ಗ್ರಾಮದ ಸ.ನಂ:393/1ರಲ್ಲಿ 2ಎ–02ಗುಂ ವಿಸ್ತೀರ್ಣದ ಜಮೀನು ಸರ್ಕಾರದಿಂದ ಅನುಮೋದನೆಯಾಗಿರುವ ಹುಣಸೂರು ಪಟ್ಟಣದ ಮಹಾಯೋಜನೆಯಲ್ಲಿ ವ್ಯವಸಾಯ/ಕೃಷಿ ವಲಯದಲ್ಲಿದ್ದು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಪಡೆದು ಸದರಿ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಆದ ನಂತರ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದು ವಸತಿ ಬಡಾವಣೆಯನ್ನು ನಿರ್ಮಿಸಿ ಸಾರ್ವಜನಿಕರಿಗೆ ಮತ್ತು ಬಡವರಿಗೆ ಕಡಿಮೆ ದರದಲ್ಲಿ ನಿವೇಶನವನ್ನು ಮಾರಾಟ ಮಾಡುವ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ಹೊಂದಿರುತ್ತೇವೆ ಎಂದು ಅರ್ಜಿದಾರರು ತಿಳಿಸಿರುತ್ತಾರೆ.

ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರನ್ವಯ ಪ್ರಕಾರ ವ್ಯವಸಾಯ/ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡುವ ಸಂಬಂಧ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 07 ದಿನಗಳ ಒಳಗಾಗಿ ಸದಸ್ಯ ಕಾರ್ಯದರ್ಶಿಗಳು, ಹುಣಸೂರು ಯೋಜನಾ ಪ್ರಾಧಿಕಾರ, ಹುಣಸೂರು ಇವರಿಗೆ ಲಿಖಿತವಾಗಿ/ನೋಂದಾಯಿತ ಅಂಚೆ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಅವಧಿ ಮುಗಿದ ನಂತರ ಬರುವ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

**ಸಹಿ/– (ಶ್ರೀ.ಹೆಚ್.ಪಿ.ಅಮರ್‌ನಾಥ್)**
**ಅಧ್ಯಕ್ಷರು**
**ಹುಣಸೂರು ಯೋಜನಾ ಪ್ರಾಧಿಕಾರ**
**ಹುಣಸೂರು**

**ಸಹಿ/– (ಶ್ರೀಮತಿ.ಹೆಚ್.ಕೆ.ರೇಣುಕ)**
**ಸದಸ್ಯ ಕಾರ್ಯದರ್ಶಿಗಳು,**
**ಹಾಗೂ ಸಹಾಯಕ ನಿರ್ದೇಶಕರು**
**ಹುಣಸೂರು ಯೋಜನಾ ಪ್ರಾಧಿಕಾರ,**
**ಹುಣಸೂರು**

DIPR/DDMYS/1224/KSMCA/674/2025-26

**ಕೊಡಗು ವಿದ್ಯಾಲಯದಲ್ಲಿ ಮಕ್ಕಳ ದಿನಾಚರಣೆ**

# ಶಿಕ್ಷಕವರ್ಗದಿಂದ ವೈವಿಧ್ಯಮಯ ಕಾರ್ಯಕ್ರಮ

ಮಡಿಕೇರಿ:ಕೊಡಗು ವಿದ್ಯಾಲಯದಲ್ಲಿ ಮಕ್ಕಳ ದಿನಾಚರಣೆಯು ಶಿಕ್ಷಕರ ಸಂಭ್ರಮದಿಂದ ಜರುಗಿತು. ಶಿಕ್ಷಕರೇ ಸಂಪೂರ್ಣ ಕಾರ್ಯಕ್ರಮವನ್ನು ನಿರ್ವಹಿಸಿ, ಮಕ್ಕಳಿಗೆ ಹಬ್ಬದ ಸಂಭ್ರಮವನ್ನು ನೆನಪಿಸಿದರು. ಕಲಾ, ಕ್ರೀಡೆ, ಹಾಸ್ಯ ಮತ್ತು ಸಂಭ್ರಮಗಳ ಸಂಯೋಜನೆಯಾಗಿ ಕೊಡಗು ವಿದ್ಯಾಲಯದಲ್ಲಿ ಮಕ್ಕಳ ದಿನಾಚರಣೆ ವಿದ್ಯಾರ್ಥಿ ಗಳಿಗೂ ಶಿಕ್ಷಕರಿಗೂ ಸ್ಮರಣೀಯ ಅನುಭವ ನೀಡಿತ್ತು.

ಶಾಲಾ ನಾಯಕ ಧಾರ್ಮಿಕ್ ಹಾಗೂ ಉಪನಾಯಕ ಶೌರ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಲಾ ಕೌನ್ಸಿಲ್ ಲೀಡರ್ ಗಳು ದೀಪ ಬೆಳಗಿಸಿದರು. ಶಿಕ್ಷಕಿ ಚಿತ್ರ ಮತ್ತು ತಂಡ ಪ್ರಸ್ತುತಪಡಿಸಿದ ಸ್ವಾಗತ ನೃತ್ಯ ಮಕ್ಕಳಲ್ಲಿ ಹೊಸ ಚೈತನ್ಯವನ್ನು ತುಂಬಿದರೆ, ಶಿಕ್ಷಕಿ ಪೊನ್ನಮ್ಮ ಮಕ್ಕಳ ದಿನಾಚರಣೆಯ ಮಹತ್ವವನ್ನು ವಿವರಿಸಿದ ಮಾಹಿತಿ ಪ್ರೇರಣಾದಾಯಕವಾಗಿತ್ತು.




ದಾಮೋದರ್ ಗೌಡ ಹಾಗೂ ತಂಡದವರು ಪ್ರದರ್ಶಿಸಿದ ಹಾಸ್ಯನಾಟಕ ಪ್ರಮುಖ ಆಕರ್ಷಣೆಯಾಗಿ ಹಾಸ್ಯದ ಹೊನಲನ್ನೇ ಹರಿಸಿತ್ತು. ದಿವ್ಯ ಹಾಗೂ ತಂಡದ ನೃತ್ಯಪ್ರದರ್ಶನ ಮತ್ತು ಸಂಗೀತ ಶಿಕ್ಷಕಿ ಪ್ರತಿಭಾ ತಂಡದವರ ಗಾಯನ ಕಾರ್ಯಕ್ರಮವೂ ಮಕ್ಕಳನ್ನು ರಂಜಿಸಿದವು. ಶಾಲೆಯ ಪ್ರಾಂಶುಪಾಲರಾದ ಸುಮಿತ್ರ ಕೆ.ಎಸ್. ಹಾಗೂ ನಾಗರಾಜ್ ಅವರು ಜನಪ್ರಿಯ ಚಲನಚಿತ್ರದ ಹಾಸ್ಯ ದೃಶ್ಯವನ್ನು ಪ್ರದರ್ಶಿಸಿ ಮಕ್ಕಳನ್ನು ನಗೆಗಡಲಲ್ಲಿ ತೇಲಿಸಿದರು. ಶಾಲಾ ಆಡಳಿತ ನಿರ್ವಹಣಾಧಿಕಾರಿ ರವಿ ಪಿ "ಬೊಂಬೆ ಹೇಳುತೈತೆ ಹಾಡು ಮಕ್ಕಳನ್ನು ಮಂತ್ರಮುಗ್ಧಗೊಳಿ ಸಿತ್ತು. ಶಿಕ್ಷಕರಾದ ಸುಮಂತ್ ,ವೀಣಾ ಎಂ.ಎಂ. ನಿರೂಪಿಸಿದರು. ವಿವಿಧ ಕ್ರೀಡಾಕೂಟ ಆಯೋಜಿತವಾಗಿತ್ತು.

# ನಗರಪಾಲಿಕೆ ಮೇಲ್ದರ್ಜೆಗೆ

ಮೈಸೂರು ಮಹಾನಗರಪಾಲಿಕೆ ಮಾಡುವುದರಿಂದ ಆಗುವ ಸಾಧಕ–ಬಾಧಕಗಳ ಬಗ್ಗೆ ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸಬೇಕಿದೆ. ಸಭೆಯಲ್ಲಿ ವ್ಯಕ್ತವಾದ ಸಲಹೆಗಳನ್ನು ಪರಿಶೀಲಿಸಿ ಅಳವಡಿಸಿಕೊಳ್ಳಲಾಗುವುದು ಎಂದರು.

ಮೈಸೂರು ವ್ಯಾಪಕವಾಗಿ ಬೆಳೆಯುತ್ತಿದೆ. 1995ರಲ್ಲಿ ನಗರ ವಿಸ್ತರಣೆ ಆಗಿದ್ದು, ಮಹಾನಗರ ಪಾಲಿಕೆ ಜಾರಿಯಲ್ಲಿದೆ. ಹಿಂದೆ ಹೆಬ್ಬಾಳ, ಮಂಚೇಗೌಡನ ಕೊಪ್ಪಲು, ಮೇಟಗಳ್ಳಿ ಮುಂತಾದ ಗ್ರಾಮಗಳನ್ನು ಹೊರವಲಯ ಎಂದು ಪರಿಗಣಿಸಲಾಗುತ್ತಿತ್ತು. ಈಗ ಅವೆಲ್ಲವೂ ಮೈಸೂರಿನ ಹೃದಯ ಭಾಗವೇ ಆಗಿವೆ. ಮೈಸೂರು ಗ್ರೇಡ್–2 ಮಹಾನಗರ ಪಾಲಿಕೆಯಾಗಿದೆ. ದೇಶದಲ್ಲಿ 10 ಲಕ್ಷ ಜನಸಂಖ್ಯೆ ಮೇಲ್ಪಟ್ಟ ನಗರವನ್ನು ಗ್ರೇಡ್–1 ಮಹಾನಗರ ಪಾಲಿಕೆ ಎನ್ನಲಾಗುತ್ತದೆ ಎಂದರು.

ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಜಿಲ್ಲಾ ಪಂಚಾಯಿತಿ ಸಿಇಒ ಯುಕೇಶ್ ಕುಮಾರ್, ಕೆಪಿಸಿಸಿ ರಾಜ್ಯ ವಕ್ತಾರ ಎಂ.ಲಕ್ಷ್ಮಣ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

# ಮೃಗಾಲಯ, ಅರಮನೆ, ವಸ್ತು ಪ್ರದರ್ಶನಗಳಲ್ಲಿ ಚಿಣ್ಣರ ದರ್ಬಾರ್

ಮೈಸೂರು: ಐಸ್ ಕ್ರೀಂ ಚಪ್ಪರಿಸುತ್ತಾ, ಗುಡ್ಡೆ ಹಾಕಿದ್ದ ಕಡಲೆಕಾಯಿಯನ್ನು ಜೇಬಿಗೆ ತುಂಬಿಕೊಳ್ಳುತ್ತಾ ನೌತೆಕಾಯಿ ರುಚಿ ನೋಡುತ್ತಲೇ ಸಂಭ್ರಮದಲ್ಲೇ ಮಕ್ಕಳು ಮೃಗಾಲಯ, ಅರಮನೆ, ವಸ್ತುಪ್ರದರ್ಶನ ಸುತ್ತಾಡಿ ದರ್ಬಾರ್ ನಡೆಸುವ ಮೂಲಕ ಮಕ್ಕಳ ದಿನವನ್ನು ಸಂಭ್ರಮಿಸಿದರು.

ಇದರ ಜೊತೆಗೆ ಕಿತ್ತಳೆ ಬಾಳೆಹಣ್ಣು ರುಚಿಯನ್ನು ಸವಿದ ಮಕ್ಕಳು, ಚಾಟ್ ದೆನಪದನ್ನ ಸೇವಿಸಿ ಹೊಟ್ಟೆ ತುಂಬಿಸಿಕೊಂಡರು. ಜೊತೆಗೆ ವಿವಿಧ ಆಟೋಟಗಳಲ್ಲಿ ಪಾಲ್ಗೊಂಡು ನಕ್ಕು ನಲಿಯುದಲ್ಲದೆ ಬಹುಮಾನವನ್ನೂ ಮನೆಗೆ ಕೊಂಡೊಯ್ದರು. ಇದು ಶುಕ್ರವಾರ ವಸ್ತುಪ್ರದರ್ಶನ ಆವರಣದಲ್ಲಿ ಕಂಡುಬಂದ ದೃಶ್ಯಾವಳಿಗಳು. ಇಷ್ಟು ವರ್ಷಗಳ ಕಾಲ ಮಕ್ಕಳ ದಿನಾಚರಣೆ ಅಂಗವಾಗಿ ಮಸ್ತುಪ್ರದರ್ಶನ ಆವರಣಕ್ಕೆ ಉಚಿತ ಪ್ರವೇಶ ಮಾತ್ರವಿತ್ತು. ಆದರೆ ಕಳೆದ ವರ್ಷದಿಂದ ಮಕ್ಕಳು ವಸ್ತು ಪ್ರದರ್ಶನ ಆವರಣದಲ್ಲಿ ಊಟ ತಿಂಡಿ, ಆಟೋಟಜುಗಳ ಸಮೇತ ಇಡೀ ದಿನ ನಂತನ ಉಲ್ಲಾಸದಿಂದ ಕಾಲ ಕಳೆಯುವಂತೆ ಅಧ್ಯಕ್ಷ





ಅಯೂಬ್ ಖಾನ್ ಎಲ್ಲ ವ್ಯವಸ್ಥೆ ಮಾಡಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಜಿಲ್ಲಾಡಳಿತದೊಂದಿಗೆ ವಸ್ತುಪ್ರದರ್ಶನ ಪ್ರಾಧಿಕಾರ ಇಂತಹ ಒಂದು ಸುಂದರ ಕಾರ್ಯಕ್ರಮವನ್ನು ಆಯೋಜಿಸಿ 3 ಸಾವಿರ ಮಕ್ಕಳನ್ನು ಆವರಣಕ್ಕೆ ಬರಮಾಡಿಕೊಂಡಿತು. ಬೆಳಿಗ್ಗೆ 10 ಗಂಟೆಗೆ ಮಕ್ಕಳಿಗಾಗಿ ತನ್ನು ಪ್ರದ ರ್ಶನ ಆವರಣವನ್ನು ಮುಕ್ತಗೊಳಿಸಲಾಗಿತ್ತು. ವಿವಿಧ ಶಾಲೆಗಳಿಗೆ ಮೊದಲೇ ಮಾಹಿತಿ ನೀಡಿದ್ದರ ಪರಿಣಾಮ 10 ಗಂಟೆ ನಂತರ ಮಕ್ಕಳು ಸಾಗರೋ ಪಾದಿಯಲ್ಲಿ ವಸ್ತುಪ್ರದರ್ಶನ ಆವರಣಕ್ಕೆ ಲಗ್ಗೆ ಇಟ್ಟರು. ಇದೇ ವೇಳೆ ರಂಗಾಯಣದ ಮಾಜಿ ನಿರ್ದೇಶಕ ಪ್ರಸನ್ನ ಹೆಗ್ಗೋಡು ಹಾಗೂ ರಾಜ್ಯೋ ತ್ಸವ ಪ್ರಶಸ್ತಿ ವಿಜೇತರಾದ ಮೈಮ್ ರಮೇಶ್, ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ರಘುರಾಜೇ ಅರಸ್ 10 ನಿಮಿಷಗಳಲ್ಲಿ ವೇದಿಕೆ ಕಾರ್ಯಕ್ರಮ ಮುಗಿಸಿ ಅತಿಥಿಗಳೂ ಕೂಡ ಮಕ್ಕಳ ಗುಂಪಿನಲ್ಲಿ ಸೇರಿಕೊಂಡು ತಾವು ಮಕ್ಕಳಂತೆಯೇ ಸಂತಸಪಟ್ಟರು. ನಂತರ ಮಕ್ಕಳಿಗೆ ಕ್ರೀಡಾ ಸ್ಪರ್ಧೆ, ವೇಷಭೂಷಣ ಸ್ಪರ್ಧೆ, ಹಾಡುಗಾರಿಕೆ ನೃತ್ಯ, ಆಶುಭಾಷಣ, ಚರ್ಚಾ ಸ್ಪರ್ಧೆಗಳು ನಡೆದವು ಎಲ್ಲಾ ಸ್ಪರ್ಧೆಗಳಿಗೂ ಆಕರ್ಷಕ ಬಹುಮಾನ ವಿತರಿಸಿದರು. ಅಂತೆಯೇ ಮೃಗಾಲಯ, ಮೈಸೂರು ಅರಮನೆ, ಚಾಮುಂಡಿ ಬೆಟ್ಟ ಹಾಗೂ ಕೃಷ್ಣರಾಜ ಸಾಗರಕ್ಕೂ ಚಿಣ್ಣರು ಗುಂಪು ಗುಂಪಾಗಿ ಸುತ್ತಾಡಿ ಮಕ್ಕಳ ದಿನದ ಸಂಭ್ರಮ ಪಟ್ಟರು.

## 50 ಹಾಸಿಗೆಗಳ ಆಸ್ಪತ್ರೆ ನಿರ್ಮಾಣ ಮಾಡಲು ಕ್ರಮ

ಹನೂರು: ತಾಲೂಕು ಕೇಂದ್ರದಲ್ಲಿ 50 ಹಾಸಿಗೆಗಳ ಆಸ್ಪತ್ರೆ ನಿರ್ಮಾಣ ಮಾಡಲು ಕ್ರಮವಹಿಸಲಾಗಿದ್ದು ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಮುಂದಿನ ದಿನಗಳಲ್ಲಿ ಆಸ್ಪತ್ರೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಶಾಸಕ ಎಂಆರ್ ಮಂಜುನಾಥ್ ತಿಳಿಸಿದರು.



ಹನೂರು ಪಟ್ಟಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು ಹನೂರು ಪಟ್ಟಣದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 50 ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಆರ್ಥಿಕ ಇಲಾಖೆ ಅನು ಮತಿ ನೀಡಿದೆ. ಆದರೆ ಹನೂರು ತಾಲೂಕು ಭೌಗೋಳಿಕವಾಗಿ ವಿಸ್ತೀರ್ಣ ಹೊಂದಿರುವುದರಿಂದ 50 ಹಾಸಿಗೆಗಳ ಆಸ್ಪತ್ರೆ ನಿರ್ಮಾಣ ಮಾಡಿದರೆ ಸಾರ್ವಜನಿಕರಿಗೆ ಸಮರ್ಪಕ ಆರೋಗ್ಯ ಸೇವೆ ಲಭಿಸು ವುದಿಲ್ಲ, ಈ ನಿಟ್ಟಿನಲ್ಲಿ 100 ಹಾಸಿಗೆಗಳ ಆಸ್ಪತ್ರೆ ಕಟ್ಟಡ ವಿನ್ಯಾಸಕ್ಕೆ ಅನುಮೋದನೆ ನೀಡುವಂತೆ ಮನವಿ ಸಲ್ಲಿಸಲಾಗಿದೆ. ಈ ಸಂಬಂಧ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಆರೋಗ್ಯ ಇಲಾಖೆಯ ಆಯುಕ್ತರಾದ ಹರ್ಷ ಗುಪ್ತ ರವರಿಗೆ ಮನವಿ ಮಾಡಲಾಗಿದ್ದು ಅನುಮೋದನೆ ನೀಡುವ ಭರವಸೆ ಇದೆ ಎಂದರು.

ಕಾಡು ಪ್ರಾಣಿಗಳ ಹಾವಳಿ ಅಥವಾ ಅನಾರೋಗ್ಯದಿಂದ ಕುರಿ, ಮೇಕೆಗಳು ಮೃತಪಟ್ಟರೆ ಇದುವರೆಗೂ ಸರ್ಕಾರದಿಂದ 4 ಸಾವಿರ ಪರಿಹಾರ ನೀಡಲಾಗುತ್ತಿತ್ತು. ಇದನ್ನು ಹೆಚ್ಚಳ ಮಾಡುವಂತೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರು ಹಾಗೂ ಅರಣ್ಯ ಸಚಿವರಾದ ಈಶ್ವರ್ ಕಂಡ್ರೆ ರವರಿಗೆ ಮನವಿ ಮಾಡಲಾಗಿತ್ತು ಮನವಿಗೆ ಸ್ಪಂದಿಸಿ ಮುಂದಿನ ದಿನಗಳಲ್ಲಿ 7.5 ಸಾವಿರ ಪರಿಹಾರ ನೀಡುವುದಾಗಿ ಭರವಸೆ ನೀಡಿದ್ದಾರೆ. ಅದೇ ರೀತಿ ನಾಟಿ ಹಸುಗಳು ಆಕಸ್ಮಿಕವಾಗಿ ಅಥವಾ ಕಾಡು ಪ್ರಾಣಿಗಳಿಂದ ಮೃತಪಟ್ಟರೆ 15 ಸಾವಿರ ಪರಿಹಾರ ವಿತರಿಸಲಾಗುತ್ತಿತ್ತು. ಇದನ್ನು ಹೆಚ್ಚಳ ಮಾಡಿ 30 ಸಾವಿರ ನೀಡುವಂತೆ ಮನವಿ ಮಾಡಿದ್ದೇನೆ ಮುಂದಿನ ದಿನಗಳಲ್ಲಿ ಪರಿಶೀಲನೆ ಮಾಡಿ ಹೆಚ್ಚಳ ಮಾಡುವುದಾಗಿ ಭರವಸೆ ನೀಡಿದ್ದಾರೆ ಎಂದರು.

ಜಲ್ ಜೀವನ್ ಮಿಷನ್ ಯೋಜನೆ ಅಡಿ ಪ್ರತಿ ಗ್ರಾಮಗಳ ಪ್ರತಿ ಮನೆಗಳಿಗೂ ಶುದ್ಧ ಕುಡಿಯುವ ನೀರಿನ ಪೂರೈಕೆ ಮಾಡುವ ಯೋಜನೆ ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೆಲವು ಗ್ರಾಮಗಳಲ್ಲಿ ಪೂರ್ಣಗೊಳ್ಳದೆ ಇರುವುದರಿಂದ ತೊಂದರೆ ಆಗಿದೆ ಈ ನಿಟ್ಟಿನಲ್ಲಿ ಅರಣ್ಯ ವ್ಯಾಪ್ತಿಯಲ್ಲಿ ಕಾಮಗಾರಿ ನಡೆಸಲು ಅನುಮತಿ ನೀಡುವಂತೆ ಈಗಾಗಲೇ ಮನವಿ ಮಾಡಲಾಗಿದೆ ಅರಣ್ಯ ಇಲಾಖೆ ವತಿಯಿಂದ ಮುಂದಿನ ದಿನಗಳಲ್ಲಿ ಅನುಮತಿ ದೊರೆಯುವ ನಿರೀಕ್ಷೆಯಿದ್ದು ಮಾರ್ಚ್ ಏಪ್ರಿಲ್ ವೇಳೆಗೆ ಪ್ರತಿ ಗ್ರಾಮಗಳಿಗೂ ಶುದ್ಧ ಕುಡಿಯುವ ನೀರು ಪೂರೈಕೆ ಮಾಡಲು ಕ್ರಮವಹಿಸಲಾಗುವುದು ಎಂದರು.

ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪ್ರತಿ ಗ್ರಾಮಗಳಿಗೂ ಕೆಎಸ್ಆರ್ಟಿಸಿ ಬಸ್ ಸೌಲಭ್ಯ ಒದಗಿಸಿಕೊಡುವ ನಿಟ್ಟಿನಲ್ಲಿ ಹನೂರು ತಾಲೂಕು ಕೇಂದ್ರದಲ್ಲಿ ಬಸ್ ಡಿಪೋ ನಿರ್ಮಾಣ ಮಾಡಲು ನಿವೇಶನ ಗುರುತಿಸಿ ಕೆಎಸ್ಆರ್ಟಿಸಿ ನಿಗಮಕ್ಕೆ ಹಸ್ತಾಂತರಿಸಲಾಗಿದೆ. ಆದರೆ ಕಟ್ಟಡ ನಿರ್ಮಾಣ ಮಾಡಲು ಅನುದಾನದ ಕೊರತೆ ಇರುವುದರಿಂದ ಬೇರೆ ಇಲಾಖೆಯ ಸಚಿವರಿಂದ ನಾಲ್ಕು ಕೋಟಿ ಅನುದಾನಕ್ಕೆ ಮನವಿ ಮಾಡಿದ್ದೇನೆ .ಅವರು ಸಹ ಅನುದಾನ ನೀಡುವ ಭರವಸೆ ನೀಡಿದ್ದು ಮುಂದಿನ ದಿನಗಳಲ್ಲಿ ಡಿಪೋ ನಿರ್ಮಾಣ ಮಾಡಲು ಚಾಲನೆ ನೀಡಲಾಗುವುದು ಇದರಿಂದ ಕ್ಷೇತ್ರದ ಪ್ರತಿಯೊಂದು ಗ್ರಾಮಗಳಿಗೂ ಸಮರ್ಪಕ ಬಸ್ಸು ವ್ಯವಸ್ಥೆ ಕಲ್ಪಿಸುವುದರಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು. ಹುಬ್ಬೆ ಹುಣಸೆ ಜಲಾಶಯ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಹೂಳು ತೆಗೆಯಲು ಕಾವೇರಿ ನೀರಾವರಿ ನಿಗಮದ ವತಿಯಿಂದ ಬಹಿರಂಗ ರಾಜು ಕರೆಯಲಾಗಿತ್ತು . ಆದರೆ ಯಾರೊಬ್ಬರು ಹರಾಜಿನಲ್ಲಿ ಪಾಲ್ಗೊಳ್ಳದೆ ಇರುವುದರಿಂದ ಮಣ್ಣು ಆವಶ್ಯಕತೆ ಇರುವ ರೈತರು ಕಾವೇರಿ ನೀರಾವರಿ ನಿಗಮಕ್ಕೆ ಅರ್ಜಿ ನೀಡಿ ಎಷ್ಟು ಲೋಡ್ ಬೇಕಾದರೂ ಮಣ್ಣು ತಿಳಿದುಕೊಳ್ಳಬಹುದು ಎಂದು ತಿಳಿಸಿದರು.

## ಜಿಆರ್‌ಎಸ್‌ನಲ್ಲಿ ಅವಘಡ: ತಾಂತ್ರಿಕ ಸಿಬ್ಬಂದಿ ದೋಷ

ಮೈಸೂರು: ನಗರದ ಹೊರ ವಲಯದಲ್ಲಿರುವ ಫ್ಯಾಂಟಸಿ ಪಾರ್ಕ್ ಒಂದಕ್ಕೆ ಕಳೆದ ಅ.1ರಂದು ತಾವು ತಮ್ಮ ಕುಟುಂಬದೊಡನೆ ಭೇಟಿ ನೀಡಿ, ಸೂಪರ್ ಡ್ರಾಪ್ ವಾಟರ್ ಸ್ಲೈಡ್ ಸಾಧನದಲ್ಲಿ ಕುಳಿತಿರುವಾಗ ಸಂಭವಿಸಿದ ಅವಘಡದಲ್ಲಿ ತಮ್ಮ ಬಲಗಾಲಿನ ಮೂರು ಬೆರಳು ತುಂಡರಿಸಿ ಹೋಗಿವೆ. ಈ ಘಟನೆಗೆ ಅಸಮರ್ಪಕ ನಿರ್ವಹಣೆ, ತರಬೇತಿ ಪಡೆದ ತಾಂತ್ರಿಕ ಸಿಬ್ಬಂದಿ ನೇಮಕವಿಲ್ಲದಿರುವುದೇ ಕಾರಣವಾಗಿದೆ ಎಂದು ದೆಹಲಿ ಮೂಲದ ಅಧಿಕಾರಿ ವಿಶಾಂತ್ ಯಾದವ್ ಆರೋಪಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಫ್ಯಾಂಟಸಿ ಪಾರ್ಕ್ಗೆ ನಿತ್ಯ ವಿದ್ಯಾರ್ಥಿಗಳು, ಪ್ರವಾಸಿಗರು ಹಾಗೂ ಸಾರ್ವಜನಿಕರು ಮನರಂಜನೆಗಾಗಿ ಆಗಮಿಸುತ್ತಾರೆ. ಆದರೆ ಇಲ್ಲಿ ಸಮರ್ಪಕ ನಿರ್ವಹಣೆ ಇಲ್ಲ, ತಾಂತ್ರಿಕ ಅರ್ಹತೆಯ ಸಿಬ್ಬಂದಿ ಇಲ್ಲ. ತಮಗೆ ಆದಂತಹ ಘಟನೆ ಆಗಾಗ್ಗೆ ಇಲ್ಲಿ ನಡೆದಿರಬಹುದಾಗಿದ್ದು, ಒಂದಷ್ಟು ಹಣ ನೀಡಿ ಮುಚ್ಚಿ ಹಾಕಲಾಗುತ್ತಿದೆ. ಅಂತಹ ಘಟನೆ ಬೆಳಕಿಗೆ ಬರುತ್ತಿಲ್ಲ. ಹೀಗಾಗಿ ಸಂಬಂಧಿಸಿದವರು ಕೂಡಲೇ ಭೇಟಿ ನೀಡಿ, ಸುರಕ್ಷತಾ ಮಾನದಂಡ ಪಾಲನೆ ಆಗುತ್ತಿದೆ ಎಂದು ಖಚಿತವಾಗುವವರೆಗೂ ಇದನ್ನು ಬಂದ್ ಮಾಡಬೇಕೆಂದು ಆಗ್ರಹಿಸಿದರು.

ಜೊತೆಗೆ, ತಮ್ಮ ಕಾಲ್ಬೆರಳೇ ಹೋಗಿರುವುದರಿಂದಾಗಿ ತಾವು ಚಿಕಿತ್ಸೆ ಪಡೆದು ಚೇತರಿಸಿಕೊಳ್ಳಲು ಇಷ್ಟು ದಿನ ಬೇಕಾಯಿತು. ಹೀಗಾಗಿ ಮೇಟಗಳ್ಳಿ ಠಾಣೆಗೆ ದೂರು ನೀಡುವುದು ವಿಳಂಬವಾಗಿದೆ. ಆದರೆ ಎಫ್‌ಐಆರ್ ಸಹಾ ದಾಖಲಾಗಿದೆ. ಈ ಫ್ಯಾಂಟಸಿ ಪಾರ್ಕ್‌ನಲ್ಲಿ ಸವಾರಿ ಯಂತ್ರೋಪಕರಣಗಳ ವೈಫಲ್ಯಕ್ಕೆ ಸಿಬ್ಬಂದಿ ಮಾತ್ರವಲ್ಲದೆ, ಆಡಳಿತವೂ ಕಾರಣವಾಗಿದೆ. ಸಿಬ್ಬಂದಿಗೆ ಸೂಕ್ತ ತರಬೇತಿ ನೀಡಿಲ್ಲ. ತುರ್ತು ಸಂದರ್ಭ ಎದುರಿಸಲು ವೈದ್ಯರೇ ಇಲ್ಲಿಲ್ಲ. ಹೀಗಾಗಿ ಇದೊಂದು ಕ್ರಿಮಿನಲ್ ಅಪರಾ ಧವಾಗಿದೆ. ಹೀಗಾಗಿ ಜಿಲ್ಲಾಡಳಿತ ಕೂಡಲೇ ಈ ಫ್ಯಾಂಟಸಿ ಪಾರ್ಕ್ ಬಂದ್ ಮಾಡಿಸಬೇಕೆಂದು ಮನವಿ ಮಾಡಿದರು. ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾಬೀದಿ ರವಿ, ಗುರು ಹಾಜರಿದ್ದರು.




# ಪೊಲೀಸರ ವಿರುದ್ಧ ಪ್ರತಿಭಟನೆ

## ನಿರಪರಾಧಿಗಳ ಮೇಲೆ ಹಲ್ಲೆ | ಪೊಲೀಸರ ಅಮಾನತ್ತಿಗೆ ಒತ್ತಾಯ

ಚಾಮರಾಜನಗರ, ತಾಲೂಕಿನ ಜ್ಯೋತಿಗೌಡನಪುರ ಗ್ರಾಮದಲ್ಲಿ ನಡೆದ ಡಾ. ಬಿ.ಆರ್. ಅಂಬೇಡ್ಕರ್ ರವರ ಫ್ಲೆಕ್ಸ್ ಹರಿದ ಹಾಗೂ ಬುದ್ದರ ಪ್ರತಿಮೆಯನ್ನು ಧ್ವಂಸಗೊಳಿಸಿರುವ ನೈಜ ಅಪರಾಧಿಗಳನ್ನು ಬಂಧಿಸಿ, ನಿರಪರಾಧಿಗಳನ್ನು ಬಿಡುಗಡೆಗೊಳಿಸಬೇಕು ಹಾಗೂ ಹಲ್ಲೆ ಮಾಡಿರುವ ಪೊಲೀಸ್ ಅಧಿಕಾರಿಗಳನ್ನು ಅಮಾನತ್ತು ಪಡಿಸಬೇಕು ಎಂದು ಒತ್ತಾಯಿಸಿ ಜಿಲ್ಲಾ ನಾಯಕ ಜನಾಂಗದ ಹೋರಾಟ ಸಮಿತಿ

ವತಿಯಿಂದ ಬೃಹತ್ ಪ್ರತಿಭಟನೆ ನಡೆಯಿತು. ನಗರದ ಮಾರಿಗುಡಿ ಮುಂಭಾಗದಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಮುಖಂಡರಾದ ಕೆಲ್ಲಂಬಳ್ಳಿ ಸೋಮನಾಯಕ, ಪು.ಶ್ರೀನಿವಾಸನಾಯಕ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತದಲ್ಲಿ ಕೆಲಹೊತ್ತು ರಸ್ತೆತಡೆ ನಡೆಸಿ, ಪೊಲೀಸ್ ದೌರ್ಜನ್ಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ನಂತರ ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಧರಣೆ ಆರಂಭಿಸಿದರು. ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಬಳಿಕ ಮಾತನಾಡಿದ ಮುಖಂಡರು ತಾಲ್ಲೂಕು ಜ್ಯೋತಿಗೌಡನಪುರ ಗ್ರಾಮದಲ್ಲಿ ಡಾ.ಬಿ. ಆರ್.ಅಂಬೇಡ್ಕರ್ ರವರ ಫ್ಲೆಕ್ಸ್ ಹರಿದು ಮತ್ತು ಬುದ್ಧ ಪ್ರತಿಮೆಯನ್ನು ಧ್ವಂಸಗೊಳಿಸಿರುವುದನ್ನು ಖಂಡಿಸಿದರು. ಆದರೆ ಈ ವಿಷಯದಲ್ಲಿ ಸ್ಥಳೀಯ ಪೊಲೀಸ್ ಅಧಿಕಾರಿಗಳು ಒತ್ತಡಕ್ಕೆ ಒಳಗಾಗಿದ್ದು, ಪ್ರಾಮಾಣಿಕವಾಗಿ ತನಿಖೆಯನ್ನು ಮಾಡುತ್ತಿಲ್ಲ. ನಿರಪರಾಧಿಗಳನ್ನು ವಿಚಾರಣೆಗೆ ಕರೆದು ದೈಹಿಕವಾಗಿ ಹಲ್ಲೆ ಮಾಡಿರುವ ಅಧಿಕಾರಿಗಳು ಸೇವೆಯಿಂದ ಅಮಾನತ್ತುಗೊಳಿಸಬೇಕು ಎಂದು ಒತ್ತಾಯಿಸಿದರು. ಈ ತನಿಖೆಯು ನಿಷ್ಪಕ್ಷಪಾತವಾಗಿರುವುದರಿಂದ ಸ್ಥಳೀಯ ಅಧಿಕಾರಿಗಳಿಂದ ತನಿಖೆಯನ್ನು ವಾಪಸ್ ಪಡೆದು ಸರ್ಕಾರ ಈ ಕೂಡಲೇ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್.ಐ.ಟಿ. (ತನಿಖಾ ತಂಡ) ವನ್ನು ಅಥವಾ ಹಾಲಿ ನ್ಯಾಯಾಧೀಶರಿಂದ ತನಿಖೆಗೆ ಆದೇಶಿಸಿ, ಈ ಕೃತ್ಯದಲ್ಲಿ ನಿರಪರಾಧಿಗಳ ಮೇಲೆ ದೈಹಿಕವಾಗಿ ಹಲ್ಲೆ ಮಾಡಿರುವ ಪೊಲೀಸ್ ಅಧಿಕಾರಿಗಳನ್ನು ಸೇವೆಯಿಂದ ಅಮಾನತ್ತುಗೊಳಿಸಬೇಕು ಎಂದು ಆಗ್ರಹಿಸಿದರು ಪ್ರತಿಭಟನೆಯಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಮುಖಂಡರಾದ ಕೆಲ್ಲಂಬಳ್ಳಿ ಸೋಮನಾಯಕ, ಪು.ಶ್ರೀನಿವಾಸನಾಯಕ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರ ಸಮಿತಿ ಅಧ್ಯಕ್ಷ ಹೆಚ್.ವಿ.ಚಂದ್ರು, ಯಳಂದೂರು ಉಮಾ ಶಂಕರ್, ಜಯಸುಂದರ್ ಮಾತನಾಡಿದರು.

ಪ್ರತಿಭಟನೆಯಲ್ಲಿ ನಗರಸಭಾ ಅಧ್ಯಕ್ಷ ಸುರೇಶ್, ಮಾಜಿ ಅಧ್ಯಕ್ಷ ಸುರೇಶ್ ನಾಯಕ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಆರ್.ಸುಂದರ್, ಜಿ.ಪಂ.ಮಾಜಿ ಸದಸ್ಯ ಸೋಮನಾಯಕ, ಯ.ರಾಜುನಾಯಕ, ಕಪಿನಿನಾಯಕ, ಕೃಷ್ಣನಾಯಕ, ಚೆಂಗುಮಣಿ, ಶಿವುವಿರಾಟ್, ಬುಲೆಟ್ ಚಂದ್ರು, ರಾಜೇಶ್, ನಾಗೇಂದ್ರ, ಚಂದ್ರಶೇಖರ್,ಸೋಮೇಶ್, ರಾಮನಾಯಕ, ಚಾ.ಸಿ.ಸೋಮನಾಯಕ, ಅಜಯ್ ಗೌಸ್, ಶಿವರಾಜ್, ಶಿವರಾಮು, ವರದನಾಯಕ, ಮಹೇಂದ್ರ, ಗಣೇಶ್, ಚಂದ್ರಶೇಖರ್, ವೆಂಕಟೇಶ್, ಸುರೇಶ್ ನಾಗ್, ರಾಮಚಂದ್ರನಾಯಕ, ಅಗರರಾಜು , ಶಕುಂತಲಾ,ಗೀತಾ ಸಿದ್ದರಾಜು, ರೇಖಾ, ನಾರಾಯಣ್ ಹಾಗೂ ಜಿಲ್ಲೆಯ ಎಲ್ಲ ಗ್ರಾಮದ ನಾಯಕ ಜನಾಂಗದ ಯಜಮಾನರು, ಕುಲಸ್ಥರು ಭಾಗವಹಿಸಿದ್ದರು.




### ಪೊಲೀಸ್ ಅಧಿಕಾರಿಗಳನ್ನು ಅಮಾನತ್ತು ಪಡಿಸುವ ತನಕ ಧರಣಿ

**ಚಾಮರಾಜನಗರ ತಾಲೂಕಿನ ಜ್ಯೋತಿಗೌಡನಪುರ ಗ್ರಾಮದಲ್ಲಿ ನಡೆದ ಡಾ. ಬಿ.ಆರ್. ಅಂಬೇಡ್ಕರ್ ರವರ ಫ್ಲೆಕ್ಸ್ ಹರಿದ ಹಾಗೂ ಬುದ್ದರ ಪ್ರತಿಮೆಯನ್ನು ಧ್ವಂಸಗೊಳಿಸಿರುವ ಪ್ರಕರಣದಲ್ಲಿ ನಿರಪರಾಧಿಯನ್ನು ಕರೆದೊಯ್ದು ಹಲ್ಲೆ ಮಾಡಿರುವ ಪೊಲೀಸ್ ಅಧಿಕಾರಿಗಳನ್ನು ಅಮಾನತ್ತುಪಡಿಸುವ ತನಕ ನಮ್ಮ ಹೋರಾಟ ಮುಂದುವರಿಯುತ್ತದೆ ಎಂದು ನಾಯಕ ವಿದ್ಯಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪು.ಶ್ರೀನಿವಾಸನಾಯಕ ಎಚ್ಚರಿಸಿದರು. ಜಿಲ್ಲೆಯಲ್ಲಿ ರಾಜಕೀಯ ಶಕ್ತಿ ಇಲ್ಲ ಎಂದು ದುರುಪಯೋಗ ಪಡಿಸಿಕೊಳ್ಳುತಿದ್ದಾರೆ. ನಾಯಕ ಸಮುದಾಯ ಎದ್ದುನಿಂತರೆ ತಕ್ಕಪಾಠ ಕಲಿಸುತ್ತದೆ ಎಂದು ಎಚ್ಚರಿಸಿದರು.**

## ಕಟ್ಟಡಗಳ ನಿರ್ವಹಣೆ ಸರ್ಕಾರದ ಹೊಣೆ

ರಾಮನಗರ: ಸಿ.ಎಸ್.ಆರ್ ನಿಧಿಯಿಂದ ಶಾಲಾ–ಕಾಲೇಜುಗಳು ಸೇರಿದಂತೆ ಕಟ್ಟಡಗಳು ನಿರ್ಮಾಣವಾಗಬಹುದು, ಆದರೆ ಅವುಗಳ ನಿರ್ವಹಣೆ, ಶಿಕ್ಷಕರ ನೇಮಕ ಹಾಗೂ ಶಾಲಾ ಆಡಳಿತದ ಸಮರ್ಪಕ ಕಾರ್ಯಪದ್ಧತಿ ಸರ್ಕಾರದ ಹೊಣೆಗಾರಿಕೆಯಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಸಂಸದ ಡಾ.ಸಿ.ಎನ್. ಮಂಜುನಾಥ್ ಸರ್ಕಾರದ ಗಮನ ಸೆಳೆದರು.

ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಮಾಕಳಿ ಗ್ರಾಮದಲ್ಲಿ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಸಂಸ್ಥೆಯು ತನ್ನ ಸಿ.ಎಸ್.ಆರ್. ನಿಧಿಯಡಿ ನಿರ್ಮಿಸಲು ಉದ್ದೇಶಿಸಿರುವ ಕರ್ನಾಟಕ ಪಬ್ಲಿಕ್ ಶಾಲೆಯ ನೂತನ ಕಟ್ಟಡದ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಗ್ರಾಮೀಣ ಪ್ರದೇಶಗಳ ಶೈಕ್ಷಣಿಕ ಅಭಿವೃದ್ಧಿ ಸಮಾಜದ ನೈಜ ಪ್ರಗತಿಯ ಅಸ್ತಿವಾರವಾಗಿದೆ. ಈ ವಿಚಾರದಲ್ಲಿ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಸಂಸ್ಥೆಯು ತನ್ನ ಸಿ.ಎಸ್.ಆರ್ ನಿಧಿಯಡಿ ಕೈಗೊಂಡಿರುವ ಈ ಶೈಕ್ಷಣಿಕ ಪ್ರಯತ್ನವು ನಿಜವಾಗಿಯೂ ಶ್ಲಾಘನೀಯ. ಇಂತಹ ನಿಧಿಗಳ ಸದುಪಯೋಗದಿಂದ ಗ್ರಾಮೀಣ



ಭಾಗಗಳಲ್ಲಿ ಶಾಲೆಗಳು ಸೇರಿದಂತೆ ಆಧುನಿಕ ಸೌಲಭ್ಯಗಳ ನಿರ್ಮಾಣವಾಗುತ್ತಿವೆ. ಶಾಲೆಗಳನ್ನು ನಿರ್ಮಿಸಿ, ಬಡ ಹಾಗೂ ಹಿನ್ನಡೆಯ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಪರಿಸರ ನಿರ್ಮಾಣವಾಗಬೇಕು, ಎಂದು ಹೇಳಿದರು. ಗ್ರಾಮೀಣ ಶಿಕ್ಷಣದ ಬುನಾದಿಯನ್ನು ಬಲಪಡಿಸಲು ಸಹಕರಿಸುತ್ತಿರುವ ಟೊಯೋಟಾ ಕಿರ್ಲೋಸ್ಕರ್ ಸಂಸ್ಥೆಯ ಹಿರಿಯ ಅಧಿಕಾರಿಗಳಿಗೆ ಹಾಗೂ ಸಂಸ್ಥೆಯ ಸಂಪೂರ್ಣ ತಂಡಕ್ಕೆ ಸಂಸದರು ಹೃತ್ಪೂರ್ವಕ ಅಭಿನಂದನೆ ಹಾಗೂ ಧನ್ಯವಾದಗಳನ್ನು ಸಲ್ಲಿಸಿದರು. ಶಾಸಕ ಶ್ರೀ ಸಿ.ಪಿ. ಯೋಗೀಶ್ವರ, ಟೊಯೋಟಾ ಕಿರ್ಲೋಸ್ಕರ್ ಸಂಸ್ಥೆಯ ಹಿರಿಯ ಅಧಿಕಾರಿಗಳು, ಗ್ರಾಮಸ್ಥರು ಹಾಗೂ ಅನೇಕ ಗಣ್ಯರು ಉಪಸ್ಥಿತರಿದ್ದರು.

## ಪ್ರಮುಖ ವೃತ್ತಗಳಿಗೆ ಗಣ್ಯರ ಹೆಸರಿಡಿ

ರಾಮನಗರ: ರಾಮನಗರದ ಪ್ರಮುಖ ವೃತ್ತಗಳಿಗೆ ಗಣ್ಯರ ಹೆಸರುಗಳನ್ನು ನಾಮಕರನ ಮಾಡುವಂತೆ ಶಾಂತಲಾ ಚಾರಿಟಬಲ್ ಟ್ರಸ್ಟ್ ವತಿಯಿಂದ ನಗರ ಸಭೆ ಅಧ್ಯಕ್ಷ ಕೆ.ಶೇಷಾದ್ರಿಗೆ ಮನವಿ ಸಲ್ಲಿಸಲಾಯಿತು.

ರಾಮನಗರದಲ್ಲಿ ಹಲವಾರು ಲೇಖಕರು ಮತ್ತು ಚಿಂತಕರು ಜನ್ಮ ತಾಳಿದ್ದಾರೆ. ಡಾ.ಜಿ.ಪಿ. ರಾಜರತ್ನಂ ಅವರು ರಾಮನಗರದ ಅಗ್ರಹಾರದಲ್ಲಿ ಜನಿಸಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಕನ್ನಡ ಸಾಹಿತ್ಯ ಲೋಕದಲ್ಲಿ ಪ್ರಸಿದ್ಧಿಯಾಗಿದ್ದಾರೆ ಎಂದು ಶಾಂತಲಾ ಚಾರಿಟಬಲ್ ಟ್ರಸ್ಟಿನ ಸಂಸ್ಥಾಪಕ ಕಾರ್ಯದರ್ಶಿ ಕವಿತಾ ರಾವ್ ತಿಳಿಸಿದರು. ಧ್ವನ್ಯಾಲೋಕ ಖ್ಯಾತಿಯ ಪ್ರೊ. ಸಿ.ಡಿ. ನರಸಿಂಹಯ್ಯ (ಕ್ಲೋಸ್ ಪೇಟೆ ದಾಸಪ್ಪ ನರಸಿಂಹಯ್ಯ) ರಾಮನಗರದಲ್ಲಿ ಜನಿಸಿದವರು. ಆಗ ರಾಮನಗರವು ಕ್ಲೋಸ್ಪೇಟೆ ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಸಿ.ಡಿ.ನರಸಿಂಹಯ್ಯ ಭಾರತೀಯ ಇಂಗ್ಲಿಷ್ ಭಾಷೆಯ ಪ್ರಸಿದ್ಧ ಲೇಖಕರು. ಇವರು ಇಂಗ್ಲಿಷ್ ಸಾಹಿತ್ಯ ಬೋಧನೆ ಹಾಗೂ ಖಚಿತ ವಿಮರ್ಶಾ ನಿಲವುಗಳಿಂದ ಭಾರತೀಯ ಸಾಹಿತ್ಯ



ವಲಯದಲ್ಲಿ ಸಿಡಿಎನ್ ಎಂದೇ ಖ್ಯಾತರಾದವರು. ಮೈಸೂರು ಹಾಗೂ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಗಳಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ವ್ಯಾಸಂಗ ಮುಗಿಸಿ ಅನಂತರದಲ್ಲಿ ಪ್ರಿನ್ಸಟನ್ ವಿಶ್ವವಿದ್ಯಾನಿಯಲದಲ್ಲಿ ರಾಕ್ಫೆಲ್ಲರ್ ಶಿಷ್ಯವೇತನ ಪಡೆದುಕೊಂಡಿದ್ದಾರೆ ಎಂದರು. ಮಹಾತ್ಮಗಾಂಧೀಜಿ ರಾಮನಗರಕ್ಕೆ ಬಂದು ಹೋಗಲು ಕಾರಣರಾದ ಗಾಂಧಿ ಕೃಷ್ಣಯ್ಯ ಅವರ ಹೆಸರನ್ನು ಸೇರಿದಂತೆ ರಾಮನಗರದಲ್ಲಿ ಜನಿಸಿದ ಮಹನೀಯರ ಹೆಸರುಗಳನ್ನು ನಗರದ ಪ್ರಮುಖ ವೃತ್ತಗಳಿಗೆ ಇಡಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ನಗರಸಭಾ ಸದಸ್ಯ ಉಪಸ್ಥಿತರಿದ್ದರು.

## ಜೆಎಸ್‌ಎಸ್ ನಾಲ್ಕು ಸಂಸ್ಥೆಗಳಿಂದ ಕನ್ನಡ ರಾಜ್ಯೋತ್ಸವ

ಮೈಸೂರು: ಮಾತೃಭಾಷೆಯ ಮೂಲಕ ಭಾವನೆ ವ್ಯಕ್ತಪಡಿಸುವುದು ಸುಲಭ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್ ಅಭಿಪ್ರಾಯಪಟ್ಟರು.

ಜೆಎಸ್‌ಎಸ್ ಫಿಸಿಯೋಥೆರಪಿ ಕಾಲೇಜು, ನರ್ಸಿಂಗ್ ಕಾಲೇಜು, ವಾಕ್ ಮತ್ತು ಶ್ರವಣ ಸಂಸ್ಥೆ, ಶುಶ್ರೂಷ ಶಾಲೆ ಸಂಯುಕ್ತವಾಗಿ ಡಾ.ಶಿವರಾತ್ರಿ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ಶನಿವಾರ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು. ಕನ್ನಡ ಕೇವಲ ಭಾಷೆಯಲ್ಲ. ಅದರೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದೇವೆ. ಕನ್ನಡಕ್ಕೆ ಘನ ಇತಿಹಾಸವಿದೆ. 850 ವರ್ಷಗಳ ಹಿಂದೆಯ ಬಸವಣ್ಣನವರ ಮೂಲಕ ಅನುಭವ ಮಂಟಪವನ್ನು ಇವತ್ತಿನ ಪ್ರಜಾತಂತ್ರ ವ್ಯವಸ್ಥೆಗೆ ಮಾದರಿಯಾಗಿ ನೀಡಿದ ಹೆಗ್ಗಳಿಕೆ ಇದೆ. ಮನೆಯಲ್ಲಿ ಮಕ್ಕಳಿಗೆ ಕನ್ನಡ ಕಲಿಸಿ, ಕನ್ನಡ ಪುಸ್ತಕಗಳನ್ನು ಓದಿಸಿ. ಅನ್ಯಭಾಷೆಯನ್ನು ಗೌರವಿಸಿ, ಕನ್ನಡವನ್ನು ಬಳಸಿ, ಉಳಿಸಿ, ಬೆಳೆಸಿ ಎಂದು ಅವರು ಕರೆ ನೀಡಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕಾರ್ಯಕ್ರಮ ಉದ್ಘಾಟಿಸಿ, ಎಂಜಿನಿಯರಿಂಗ್ ಕಲಿತವರ ಜೊತೆಗೆ ವೈದ್ಯಕೀಯ, ಅರೆ ವೈದ್ಯಕೀಯ, ನರ್ಸಿಂಗ್ ಕಲಿತವರು ಕೂಡ ವಿದೇಶಗಳಲ್ಲಿ ಕನ್ನಡವನ್ನು ಬೆಳೆಸುವ ಕೆಲಸ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜೆಎಸ್‌ಎಸ್ ವಿವಿಧ ಸಂಸ್ಥೆಗಳ ಮುಖ್ಯಸ್ಥರಾದ ಡಾ.ರಾಜೇಶ್, ಅಶ್ವತಿ ದೇವಿ, ಡಾ.ಕವಿತಾರಾಜ್, ಡಾ.ರೇಣುಕಾ ಡಾ.ಹೇಮಂತ್, ಜೆಎಸ್‌ಎಸ್ ನರ್ಸಿಂಗ್ ಉಪ ಶಾಲೆಯ ಪ್ರಾಂಶುಪಾಲೆ ಮಾನಸ, ಉಪನ್ಯಾಸಕಿ ನೀತಾ ದಳವಿ, ಉಪನ್ಯಾಸಕ ಸಿ.ಎಸ್. ಸುನಿಲ್ ಕುಮಾರ್ ಮೊದಲಾದವರು ಇದ್ದರು.



ಸುಳ್ವಾಡಿ ಕುಚ್ ಗುತ್ ಮಾರಮ್ಮ ದೇವಸ್ಥಾನದ ವಿಷ ಪ್ರಸಾದ ಪ್ರಕರಣ

# ಮುಂದಿನ ದಿನಗಳಲ್ಲಿ ಸೌಲಭ್ಯ ಕೊಡಿಸಲು ಪ್ರಾಮಾಣಿಕ ಪ್ರಯತ್ನ

ಹನೂರು: ಸುಳ್ವಾಡಿ ಕುಚ್ ಗುತ್ ಮಾರಮ್ಮ ದೇವಸ್ಥಾನದ ವಿಷ ಪ್ರಸಾದ ದುರಂತದ ಸಂತ್ರಸ್ತರಿಗೆ ಸರ್ಕಾರದ ಸೌಲಭ್ಯಗಳು ಸಿಗುವುದರಲ್ಲಿ ವಿಳಂಬವಾಗಿದ್ದೂ, ಮುಂದಿನ ದಿನಗಳಲ್ಲಿ ಸೌಲಭ್ಯಗಳನ್ನು ಕೊಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಶಾಸಕ ಎಂಆರ್ ಮಂಜುನಾಥ್ ತಿಳಿಸಿದರು.

ಹನೂರು ಪಟ್ಟಣದ ಶಾಸಕರ ನಿವಾಸದಲ್ಲಿ ಭೇಟಿಯಾದ ಸುಳ್ವಾಡಿ ಸಂತ್ರಸ್ಥರನ್ನು ಕುರಿತು ಮಾತನಾಡಿದ ಅವರು ಸುಳ್ವಾಡಿ ವಿಷಪ್ರಾಶನ ದುರಂತದ ಸಂತ್ರಸ್ತರು ಭೇಟಿ ಮಾಡಿ ಪ್ರಮುಖ ಆರೋಪಿಯಾದ ಇಮ್ಮಡಿ ಮಹಾದೇವಸ್ವಾಮಿ ಜಾಮೀನು ರದ್ದು ಪಡಿಸುವಂತೆ ಮನವಿ ಮಾಡಿದ್ದಾರೆ.

ಆದರೆ ಹೈಕೋರ್ಟ್ ಆರೋಪಿ ಇಮ್ಮಡಿ ಮಹದೇವಸ್ವಾಮಿಯವರ ಚಿಕಿತ್ಸೆಗಾಗಿ ಷರತ್ತು ಬದ್ಧ ಜಾಮೀನು ನೀಡಿದೆ. ಹೈಕೋರ್ಟ್ ನ ಆದೇಶಕ್ಕೆ ಪ್ರತಿಯೊಬ್ಬರು ಗೌರವ ನೀಡಬೇಕು ಈ ವಿಚಾರದಲ್ಲಿ ನಾವು ಹಸ್ತಕ್ಷೇಪ ಮಾಡುವುದಾಗಲಿ, ಪ್ರಶ್ನೆ ಮಾಡಲು ಆಗುವುದಿಲ್ಲ, ಈಗಾಗಲೇ ಜಿಲ್ಲಾಡಳಿತ ವತಿಯಿಂದ ಸಂತ್ರಸ್ತರಿಗೆ ಚಿಕಿತ್ಸೆ ನೀಡಲಾಗುತ್ತಿದೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆಹಾರ ಕಿಟ್ ವಿತರಣೆ ಮಾಡಲಾಗುತ್ತಿದೆ. ಇನ್ನು ನಿವೇಶನ, ಜಮೀನು ನೀಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆಸಿ ಪ್ರತಿಯೊಬ್ಬ ಬಾಧೀತರಿಗೂ ಕೊಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ವಿಷಪ್ರಶಾನ ಬಾಧಿತರಿಗೆ ಈಗಾಗಲೇ ಮೊಬೈಲ್ ವ್ಯಾನ್ ನಲ್ಲಿ ನುರಿತ ಸಿಬ್ಬಂದಿಗಳು ಬಂದು ಚಿಕಿತ್ಸೆ ನೀಡುತ್ತಿದ್ದಾರೆ. ಪ್ರತಿಯೊಬ್ಬರು ಅಗತ್ಯ ಚಿಕಿತ್ಸೆಗಳನ್ನು ಪಡೆದುಕೊಳ್ಳಬೇಕು ಹೆಚ್ಚಿನ ಚಿಕಿತ್ಸೆ ಬೇಕಿದ್ದರೆ ಜಿಲ್ಲಾಧಿಕಾರಿಗಳ ಜೊತೆ ಚರ್ಚೆ ನಡೆಸಿ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು ಪ್ರತಿಯೊಬ್ಬರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದು ಮನವಿ ಮಾಡಿದರು.



ಸಂತ್ರಸ್ತರು ಮಾತನಾಡಿ ಈಗಾಗಲೇ ನಾವು ನಮ್ಮ ಕುಟುಂಬಸ್ಥರನ್ನು ಕಳೆದುಕೊಂಡು ತುಂಬಾ ದುಃಖದಲ್ಲಿ ಇದ್ದೇವೆ.ವಿಷ ಪ್ರಸಾದ ದುರಂತದ ಮೊದಲನೇ ಆರೋಪಿ ಮಹದೇವಸ್ವಾಮಿಗೆ ಜಾಮೀನು ನೀಡಿದ್ದು ನಮಗೆ ಗಾಯದ ಮೇಲೆ ಬರ ಎಳೆದಂತಾಗಿದೆ. ಹಾಗಾಗಿ ಜಾಮೀನು ರದ್ದುಪಡಿಸಲು ತಾವು ಸೂಕ್ತ ಕ್ರಮ ವಹಿಸಬೇಕು, ಜೊತೆಗೆ ಅಂದಿನ ಸಮ್ಮಿಶ್ರ ಸರ್ಕಾರದಲ್ಲಿ ನೀಡಿದ್ದ ಭರವಸೆ ಭರವಸೆಯಾಗಿಯೇ ಉಳಿದಿದೆ ಮುಂದಿನ ದಿನಗಳಲ್ಲಿ ಸರ್ಕಾರ ಈ ಹಿಂದೆ ನೀಡಿದ್ದ ಭರವಸೆಗಳನ್ನು ಈಡೇರಿಸುವಲ್ಲಿ ತಾವು ಹೆಚ್ಚಿನ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸುಳ್ವಾಡಿ ವಿಷ ಪ್ರಸಾದ ದುರಂತದ ಸಂತ್ರಸ್ತರು ಎಂಜಿ ದೊಡ್ಡಿ ಗ್ರಾಮಸ್ಥರು ಬಿದರಹಳ್ಳಿ ಗ್ರಾಮಸ್ಥರು ಉಪಸ್ಥಿತರಿದ್ದರು.

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಹಾಸನ: ಜನಕಲ್ಯಾಣ ರೀಸರ್ಚ್ ಅಂಡ್ ಚಾರಿಟಬಲ್ ಟ್ರಸ್ಟ್(ರಿ) ಹಾಗೂ ಉದಯರವಿ ವಾಹಿನಿ ಇವರ ಸಂಯುಕ್ತಾಶ್ರಯದಲ್ಲಿ 2024–25ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ, ಪಿ.ಯು.ಸಿ ಹಾಗೂ ಪದವಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಹಾಸನ ಜಿಲ್ಲೆಯ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಏರ್ಪಡಿಸಲಾಗಿದೆ, ಶೇ.95ಕ್ಕಿಂತ ಹೆಚ್ಚು ಅಂಕ ಪಡೆದ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ವಿದ್ಯಾರ್ಥಿಗಳು ತಮ್ಮ ಸ್ವ ವಿವರಗಳೊಂದಿಗೆ, ಭಾವಚಿತ್ರ, ಅಂಕಪಟ್ಟಿಯನ್ನು ಲಗತ್ತಿಸಿ ನ.30ರೊಳಗೆ ಪ್ರತಿನಿಧಿ ದಿನಪತ್ರಿಕೆ ಕಛೇರಿ, ಬಸಟ್ಟಿಕೊಪ್ಪಲು ಮುಖ್ಯ ರಸ್ತೆ, ಕೆ.ಆರ್.ಪುರಂ, ಹಾಸನ ಇಲ್ಲಿಗೆ ತಲುಪಿಸಬೇಕಾಗಿ ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ 9964287633, 9148684266 ಸಂಪರ್ಕಿಸಬಹುದು.

# ಸನ್ನಿವೇಶಗಳು–ಅಹಂ–ಸಂಬಂಧಗಳು!



ಸ್ನೇಹಲೋಕ


ಜೀವನದಲ್ಲಿ ಆನಂದ, ಶಾಂತಿ, ಸಮಾಧಾನಗಳ ತಂಪನ್ನು ಕೊಡುವ ಬಹು ಮುಖ್ಯ ಅಂಶ ಸುಮಧುರ ಸಂಬಂಧಗಳು.

ತಂದೆ–ತಾಯಿ, ಒಡಹುಟ್ಟಿದವರು, ಬಂಧು–ಬಳಗದವರೊಂದಿಗೆ ಉತ್ತಮ ಸಂಬಂಧವೊಂದಿದ್ದರೆ ಜೀವನದ ಇನ್ನೆಲ್ಲ ಕೊರತೆಗಳೂ ಚಿಕ್ಕದಾಗಿ ಕಾಣುತ್ತವೆ. ದೊಡ್ಡ ವಾಹನ, ವಿಶಾಲ ಮನೆ, ಶ್ರೀಮಂತಿಕೆಗಳೂ ಗೌಣವಾಗುತ್ತವೆ. ಅದೇ ನಮ್ಮವರೊಂದಿಗೆಯ ಸಂಬಂಧಗಳು ಸರಿಯಿಲ್ಲದಾಗ ಯಾವ ಗೌರವ, ಮನ್ನಣೆಗಳು, ವಿದ್ಯಾರ್ಹತೆಗಳೂ ಪೂರ್ಣ ಆನಂದ, ತೃಪ್ತಿಯನ್ನು ಅನುಭವಿಸಲು ಸಾಧ್ಯಮಾಡದು, ಇವೆಲ್ಲವೂ ಕೇವಲ ಅಹಂ ಅನ್ನು ತೃಪ್ತಿಪಡಿಸಬಹುದಷ್ಟೆ. ಎಷ್ಟೋ ಬಾರಿ ಸಣ್ಣ ಪುಟ್ಟ ವಿಷಯಗಳು, ಸಾಂದರ್ಭಿಕ/ಸಾನ್ನಿವೇಶಿಕ ಭಿನ್ನಾಭಿಪ್ರಾಯಗಳು ಅಥವಾ ಅಕಸ್ಮಿಕ ತಪ್ಪುಗಳು, ದಶಕಗಳ ಸಂಬಂಧಗಳನ್ನು ಬಿರುಕುಗೊಳಿಸುತ್ತವೆ.ನೂರು 'ಸರಿ' ಯನ್ನು ಒಂದು ತಪ್ಪು ನಿವಾಳಿಸಿ ಹಾಕುತ್ತದೆ. ಎರಡೂ ಬದಿಯಿಂದ ಯೋಚಿಸಿದಾಗ ಅರಿತು ಸಹಮತ ತಲುಪಲು ಸಾಧ್ಯವಾಗಬಹುದು. ತಪ್ಪಿದ್ದವರು ಒಪ್ಪಬಹುದು ಅಥವಾ ಸರಿಯಿದ್ದವರೇ ನಿರ್ಲಕ್ಷಿಸ ಬಹುದು/ಕ್ಷಮಿಸಬಹುದು.ಆದರೆ ಹಾಗಾಗುವುದಿಲ್ಲ.

ಯಾಕೆ ಹೀಗೆ ಎಂದು ಮಂಥಿಸಿದಾಗ ಅರಿವಾಗುವ ಕಾರಣ ಬಹುತೇಕ 'ಅಹಂ' ಎಂದು. ಒಮ್ಮೆ ಈ ಅಹಂ ಎದ್ದು ಕುಳಿತರೆ ಮಿಕ್ಕೆಲ್ಲವೂ ಹಿಂದಾಗುತ್ತವೆ, ವಾಸ್ತವ್ಯವನ್ನು ತಿಳಿಯಲು ಬುದ್ಧಿ ಮಂಕಾಗುತ್ತದೆ, ಸನ್ನಿವೇಶವನ್ನು ಸರಿಯಾಗಿ ನೋಡಲು ಕಣ್ಣುಗಳು ಅಂಧ ವಾಗುತ್ತವೆ. ಮತ್ತೊಂದು ಕಾರಣ...ಸಾಮಾನ್ಯವಾಗಿ ಅಸಹಮತ, ತಿರಸ್ಕಾರ, ಭಿನ್ನಾಭಿಪ್ರಾಯಗಳು ಹುಟ್ಟುವುದು ಸನ್ನಿವೇಶ, ವಿಷಯ ಅಥವಾ ಪರಿಸ್ಥಿತಿಗಳಬಗ್ಗೆ. ಆದರೆ ಅಹಂನಿಂದಾಗಿ ನಾವು ಇದನ್ನು ನಮ್ಮ ವ್ಯಕ್ತಿತ್ವದ ತಿರಸ್ಕಾರ ಎಂದು ತಿಳಿದು ನಮ್ಮಗಳ ಮಧ್ಯ ದೂರ, ಬೇಸರ, ಕೋಪ ಅಥವಾ ದ್ವೇಷಗಳನ್ನು ಸೃಷ್ಟಿಸುವದಲ್ಲದೇ ಅದನ್ನು ನಿರಂತರ ಬೆಳೆಸುತ್ತಾ ಹೋಗುತ್ತೇವೆ.

ಇಲ್ಲೊಂದು ಬಹು ಮುಖ್ಯ ವಿಚಾರವಿದೆ. ಮನುಷ್ಯನ ಮಿದುಳು, ಯೋಚನೆಯ ತೀವ್ರತೆಗನುಗುಣವಾಗಿ ದೇಹಕ್ಕೆ ಅನುಭವ ಕೊಡುವ ಗುಣ ಹೊಂದಿದೆ, ಯೋಚನೆಯ ವಸ್ತು ನಿಜ ಇರಬಹುದು, ಕಾಲ್ಪನಿಕವಿರಬಹುದು ಅಥವಾ ಮುಂಚಿನ ಅನುಭವದ ತೀವ್ರ ನೆನಪು ಇರಬಹುದು, ಯಾವುದೇ ಇದ್ದರೂ ಅದನ್ನು ನಿಜ ಮತ್ತು ಈಗಲೇ ಘಟಿಸುತ್ತಿರುವ ಅನುಭವ ಕೊಡುತ್ತದೆ. ಹಾಗಾಗಿ ಈ ಭಿನ್ನಾಭಿಪ್ರಾಯ , ಬೇಸರ, ದ್ವೇಷದ ಅನುಭವ ಪದೇ ಪದೇ ಆಗುತ್ತದಲ್ಲದೆ, ವ್ಯಕ್ತಿಗಳ ಮಧ್ಯದ ಕಂದಕ ಹಿರಿದಾಗುತ್ತ ಹೋಗುತ್ತದೆ. ಹಾಗಾದರೆ ಇದಕ್ಕೆ ಪರಿಹಾರವೇನು ಖಂಡಿತ ಇದೆ.ತಪ್ಪು ಕಲ್ಪನೆಗಳು ಅಥವಾ ಭಿನ್ನಾಭಿಪ್ರಾಯ ಇದ್ದರೆ, ಪರಸ್ಪರ ಮಾತನಾಡಿ, ಇದು ಕೇವಲ ಸಾನ್ನಿವೇಶಿಕ, ವೈಯಕ್ತಿಕವಲ್ಲ ಎಂದು ಅರಿಯುವ ಪ್ರಯತ್ನ ಪಟ್ಟಾಗ ಭಿನ್ನಾಭಿಪ್ರಾಯ ಮಾಯವಾಗುವದಲ್ಲದೆ, ಅಹಂ ಗೂ ಆಸ್ಪದವಿರುವದಿಲ್ಲ.ಅಥವಾ ಒಬ್ಬರಿಂದ ತಪ್ಪು ಆಗಿದ್ದರೆ ತಪ್ಪು ಮಾಡಿದ ವ್ಯಕ್ತಿ ಅಹಂ ಅನ್ನು ಹಿಂದೆತಳ್ಳಿ ಕ್ಷಮೆ ಕೋರುವುದು ಸೂಕ್ತ ವರ್ತನೆ. ಕೆಲ ಅನಿವಾರ್ಯ ಸಂದರ್ಭದಲ್ಲಿ ತಪ್ಪುಮಾಡದ ವ್ಯಕ್ತಿಯೇ ಒಂದು ಹೆಜ್ಜೆ ಹಿಂದೆ ಸರಿದು ಕ್ಷಮೆಕೋರಿ ಪ್ರಸಂಗವನ್ನು ತಿಳಿಯಾಗಿಸಬಹುದು. ಇದು ಒಂದು ನೋಟಕ್ಕೆ ಅಸಮಂಜಸ ಎನಿಸಬಹುದು, ಇಲ್ಲಿನ ಕ್ಷಮೆ, ಸರಿ–ತಪ್ಪು ಗಳಿಗಿಂತ ನಂಬಂಧಗಳ ಮೌಲ್ಯವನ್ನು ಎತ್ತಿ ಹಿಡಿಯುತ್ತದೆ!

ಅಹಂ ಅನ್ನು ಮೆಟ್ಟಿನಿಲ್ಲಲು ಇರುವ ಏಕೈಕ ಆಯುಧ 'ಕ್ಷಮಾದಾನ ಮತ್ತು ಕ್ಷಮಾಯಾಚನೆ'. ತಪ್ಪು–ಸರಿ ಗಳನ್ನು ಮೆಟ್ಟಿನಿಂತು, ಸುಮಧುರ ಸಂಬಂಧಗಳನ್ನು, ಶಾಂತಿ–ನೆಮ್ಮದಿಗಳನ್ನು ಅನುಭವಿಸುವ ಮನವಿದ್ದರೆ ಈ ನಿಟ್ಟಿನಲ್ಲಿ ಒಂದು ಹೆಜ್ಜೆ ಇಟ್ಟು ನೋಡೋಣ.




ಸ್ನೇಹಾ ಆನಂದ್

# ಸ್ವಲ್ಪ ಹೊತ್ತು ಇತ್ತ ವ್ಯಯಿಸಿದರೆ ಚಂದದ ಲೇಖನ ಸೃಷ್ಟಿಯಾಗಬಲ್ಲದು

ಅಯ್ಯೋ ಲೇಖನವೊಂದನ್ನು ಬರೆದು ಎಷ್ಟೋ ದಿನಗಳಾಗಿಬಿಟ್ಟಿದೆ. ಸ್ವಲ್ಪ ಹೊತ್ತು ಕುಳಿತು ಶ್ರದ್ಧೆಯಿಂದ ಬರೆದರೆ ಚಂದದ ಬರಹಗಳನ್ನು ಕಟ್ಟಿಕೊಡುವುದು ಕಷ್ಟದ ಕೆಲಸವೇನಲ್ಲ. ಆದರೆ ಆ ರೀತಿ ಕುಳಿತು ಬರೆಯುವ ಶ್ರದ್ಧೆಯನ್ನು ನಮ್ಮದಾಗಿಸಿಕೊಳ್ಳುವುದು ಕಷ್ಟದ ಕೆಲಸ. ಕೆಲವೊಮ್ಮೆ ನಮ್ಮ ಕೆಲಸಗಳ ಒತ್ತಡ, ಸಮಯದ ಅಭಾವ, ನಮ್ಮೊಳಗಿನ ಶ್ರದ್ಧೆ, ಸೃಜನಶೀಲತೆ ಒಂದು ದಿನ ಹಠಾತ್ತನೆ ಮಾಯವಾಗಿ ಏನು ಬರೆಯಬೇಕು ಅಥವಾ ಏನು ಮಾಡಬೇಕು ಎಂಬ ಭಾವನೆ ತುಂಬಿದ ಶೂನ್ಯತೆ ನಮ್ಮಲ್ಲಿ ಬೇರೂರಿಬಿಟ್ಟಿರುತ್ತದೆ. ಕೆಲವು ದಿನಗಳ ಹಿಂದೆ ನಾನು ಕೂಡ ಹೀಗೆ ಬರೆಯುವುದನ್ನು ಒಮ್ಮೆಲೇ ನಿಲ್ಲಿಸಿಬಿಟ್ಟಿದ್ದೆ. ಒಬ್ಬ ನಿರೋದ್ಯೋಗಿ ತನ್ನ ಕೆಲಸವಿಲ್ಲದತನವನ್ನು ಸೋಮಾರಿತನದ ಮೂಲಕ ಆಚರಿಸುವ ಹಾಗೆ ಒಬ್ಬ ಬರಹಗಾರ/ಬರಹಗಾರ್ತಿ ಬರೆಯುವುದನ್ನು ನಿಲ್ಲಿಸಿದ ಮರುಕ್ಷಣ ಒಂದು ಚಂದದ ಸೋಮಾರಿತನವನ್ನು ತನಗೆ ಗೊತ್ತಿಲ್ಲದೆ ಅನುಭವಿಸುತ್ತಾ ಹೋಗುತ್ತಾನೆ/ಳೆ. ಯಾರಾದರೂ ಯಾಕೆ ಏನು ಬರೀತಿಲ್ಲ ಏನಾದ್ರು ಬರೀರಿ ಎಂದು ಮಕ್ಕಳಿಗೆ ಪೆಪ್ಪರ್ ಮಿಂಟ್ ಕೊಟ್ಟು ಆಸೆ ತೋರಿಸುವ ಹಾಗೆ ಏನಾದರೊಂದು ಮ್ಯಾಜಿಕ್ ಮಾಡಿದರಷ್ಟೇ ನಿದ್ರಿಸುತ್ತಿರುವ ಬರಹಗಾರನನ್ನು ಮತ್ತೆ ಎಬ್ಬಿಸಲು ಸಾಧ್ಯವಾಗುವುದು ಅನ್ನಿಸುತೆ.

ಕೆಲವೊಮ್ಮೆ ಪ್ರತೀ ವಾರ ತಪ್ಪದೇ ಏನಾದರೊಂದು ಬರೆಯಲೇಬೇಕು ಎಂದು ನಮಗೆ ನಾವೇ ದಂಬಾಲು ಬೀಳುವುದು ಸರಿಯೋ ತಪ್ಪೋ ಗೊತ್ತಿಲ್ಲ. ಹಾಗೆ ಪ್ರತಿ ವಾರ/ ಪ್ರತಿ ದಿನ



ಬರೆಯಲೇಬೇಕೆಂಬ ಜವಾಬ್ದಾರಿ ಹೊತ್ತ ಬರಹಗಾರನಲ್ಲಿ ಏನಾದರೊಂದು ಬರೆಯಲೇಬೇಕೆಂಬ ಒತ್ತಡವಿರುತ್ತದೆ. ಆ ಒತ್ತಡ ಆ ಬರಹಗಾರನನ್ನು ಕೆಲವು ಸಲ ಏನು ಬರೆಯಬಹುದು ಎಂಬ ಶೂನ್ಯತೆಯೆಡೆಗೆ ನೂಕುವಲ್ಲಿ ಯಶಸ್ಸು ಪಡೆಯುತ್ತದೆ. ಅಂತಹ ಒತ್ತಡಗಳಲ್ಲಿ ಬರೆದ ಬರಹಗಳಲ್ಲಿರುವ ಒಂದು ಶೂನ್ಯತೆ, ಆ ಲೇಖಕನ ಬರವಣಿಗೆಯಲ್ಲಿ ಮಾಯವಾಗಿರುವ ಓದಿಸಿಕೊಳ್ಳುವಿಕೆ ಎಲ್ಲವೂ ಆ ಲೇಖಕನಿಗೆ ಕಾಣದಿದ್ದರೂ ಆತನ/ಆಕೆಯ ಬರಹಗಳನ್ನು ತಪ್ಪದೇ ಓದುತ್ತಿರುವ ಓದುಗರ ಕಣ್ಣಿಗೆ ಬರಹಗಳಲ್ಲಿನ ಶೂನ್ಯತೆಯ ಕಾರಣದ ನ್ಯೂನತೆಗಳು ಸ್ಪಷ್ಟವಾಗಿ ಎದ್ದು ಕಾಣುತ್ತವೆ. ಆಗ ಆ ಓದುಗರು ಈ ವಾರ ಏನೋ ಒಂದು ಕಾಣುತ್ತಿಲ್ಲ, ಎನ್ನುವ ಒತ್ತಡಕ್ಕೆ ಬೀಳುವುದು ಕೂಡ ಉಂಟು. ಹಾಗಾದರೆ ಒಬ್ಬ ಲೇಖಕ/ಲೇಖಕಿಯರಲ್ಲಿ ಶೂನ್ಯತೆ ಮೂಡಿದ ಕ್ಷಣ ಕೆಲವು ದಿನಗಳವರೆಗೆ

ಬರವಣಿಗೆಗೆ ರಜೆ ಹಾಕಿ ಬರೆಯುವುದಕ್ಕಾಗಿಯಾದರೂ ಒಂದಷ್ಟು ಬದುಕಿನ ಅನುಭವಗಳ ತನ್ನದಾಗಿಸಿಕೊಂಡು ಮತ್ತೆ ಫ್ರೆಶ್ ಅಪ್ ಆಗಿ ಬರೆಯಲು ಕುಳಿತರೆ ಆ ಬರವಣಿಗೆಯಲ್ಲಿ ಕಾಣುವ ಬದಲಾವಣೆಯ ಗಾಳಿಯ ಕಂಪನ್ನು ಓದುಗರು ಅನುಭವಿಸಬಲ್ಲರು ಎಂಬುದು ನನ್ನ ಅನಿಸಿಕೆ.

ಹೆಚ್ಚಿನ ಬರಹಗಾರರು ಅಂತರ್ಜಾಲ ತಾಣಗಳಲ್ಲಿ ಬರೆಯುತ್ತಾರೆ ಹೊರತು ಎಲ್ಲೂ ಹಂಚುವುದಿಲ್ಲ. ಹಿಂದೊಮ್ಮೆ ತಮ್ಮ ಲೇಖನ ಬರೆದು ಸುಮ್ಮನಾಗುತ್ತಿದ್ದ ಗೆಳೆಯರೊಬ್ಬರು ಈಗ ಸಮಯ ಮಾಡಿಕೊಂಡು ತಮ್ಮ ಬರಹಗಳನ್ನು ವೃತ್ತಪತ್ರಿಕೆಗಳಿಗೆ ಕಳಿಸಿ ಪ್ರಕಟಿಸುವುದರ ಮೂಲಕ ಹಂಚಿಕೊಳ್ಳುತ್ತಿದ್ದಾರೆ. ಅಚ್ಚರಿಯೆಂದರೆ ಅವರು ಲೇಖನಗಳನ್ನು ಹಾಗೆ ಹಂಚಿಕೊಳ್ಳಲು ಶುರು ಮಾಡಿದ ಮೇಲೆ ಅವರ ಓದುಗರ ಬಳಗ ಸಿಕ್ಕಾಪಟ್ಟೆ ಹೆಚ್ಚಾಗಿದೆ ಅಂತೆ. ಹಾಗೆ ಬರಹಗಳನ್ನು ಹಂಚಿಕೊಳ್ಳುವುದು ಒಂದು ಕಲೆ. ಮಾಡೋಕೆ ಇವರಿಗೆ ಕೆಲಸವಿಲ್ಲ, ಏನೇನೋ ಬರೆದು ಓದಿ ಓದಿ ಅಂತ ನಮ್ಮ ಜೀವ ತಿಂತಾರೆ ಅನ್ನುವವರ ಜೊತೆ ಬರಹಗಳನ್ನು ಹಂಚಿಕೊಳ್ಳಬೇಕಾದ ಅವಶ್ಯಕತೆ ಇರುವುದಿಲ್ಲ. ಯಾಕೆಂದರೆ ಬರಹಗಳು ನಿಜಕ್ಕೂ ಚೆನ್ನಾಗಿದ್ದರೆ ಓದಿ ಮೆಚ್ಚುಗೆಯ ತಿಳಿಸಲು, ಇಲ್ಲವೇ ಮನಸ್ಸೋ ಇಚ್ಚೆ ನೀವು ಬರೆದದ್ದು ಸರಿಯಲ್ಲ ಎಂದು ಸಹೃದಯಿ ಓದುಗರ ವೃಂದ ಯಾವಾಗಲು ಕಾಯುತ್ತಿರುತ್ತದೆ. ಅವರಿಗೆ ಓದಲು ಮೆಚ್ಚಲು ಒಳ್ಳೆಯ ಬರಹಗಳು ಬೇಕು ಅಷ್ಟೆ. ಹಾಗೆ ಒಳ್ಳೆಯ ಬರಹಗಳನ್ನು ಬರೆದು ಓದುಗರನ್ನು ಒಲಿಸಿಕೊಂಡಷ್ಟೂ ಬರಹಗಾರನ ಬರೆಯುವ ಜವಾಬ್ದಾರಿ ಹೆಚ್ಚಾಗುತ್ತದೆ.

ಇನ್ನು ಫೇಸ್ ಬುಕ್ ನಲ್ಲಿ ಪ್ರಕಟಿಸಿದರೆ ಮೆಚ್ಚುಗೆ ಒತ್ತಿಲ್ಲ, ಕಾಮೆಂಟ್ ಮಾಡಿಲ್ಲ ಅಂದ್ರೆ ಹೆಚ್ಚು ಜನ ಬರಹಗಳನ್ನು ಓದಿಯೇ ಇಲ್ಲವೇನೋ ಎಂಬ ತಪ್ಪು ಅಭಿಪ್ರಾಯಗಳು ಬರಹಗಾರನಲ್ಲಿ ಮೂಡುವುದು ಸಹಜ. ಅಂತಹ ಭಾವನೆಗಳು ಬರಹಗಾರನೊಳಗೆ ಬೇರೂರಿದಾಗ ಆತ ಬರೆಯುವುದನ್ನೇ ನಿಲ್ಲಿಸುವ ಸಾಧ್ಯತೆಗಳಿರುತ್ತವೆ.

ಇನ್ನೂ ಕೆಲವರ ಕಾಮೆಂಟ್ಗಳು, ಗುಂಪುಗಾರಿಕೆ ಇತ್ಯಾದಿ ಬರಹಗಾರನ ಮೇಲೆ ನೆಗೆಟೀವ್ ಆದ ಪರಿಣಾಮಗಳನ್ನು ಬೀರುತ್ತಿರುತ್ತವೆ.

ಅವುಗಳನ್ನೆಲ್ಲಾ ಮೀರಿ ನಿಲ್ಲಿವುದು ಪ್ರತೀ ಬರಹಗಾರನ ಕರ್ತವ್ಯ. ಎಂದಿನಂತೆ ಈ ವಾರವೂ ವರ್ತಮಾನ ಪತ್ರಿಕೆಯಲ್ಲಿ ಈವೊಂದು ಲೇಖನವನ್ನು ಬರೆದು ನಿಮ್ಮ ಮುಂದೆ ಇಟ್ಟಿದ್ದೇನೆ.

ನಿಮಗೇನಾದರೂ ಇಷ್ಟ ಆದರೆ ಮೆಚ್ಚುಗೆ ಸೂಚಿಸಿ, ನಿಮ್ಮ ಪ್ರೀತಿ ಪ್ರೋತ್ಸಾಹ ಸಹಕಾರ ಹೀಗೆಯೇ ಇರಲಿ ಎನ್ನುತ್ತಾ ಮತ್ತೆ ಮುಂದಿನ ಲೇಖನದಲ್ಲಿ ಸಿಗುವೆ.



ಪುಷ್ಪ ಪ್ರಸಾದ್

# ಬಳಗದ ಗಂಟು

## ಕಥೆ



ಮನೆಯಲ್ಲಿ ಮದುವೆಯ ಸಡಗರ. ಹುಡುಗನಿಗೆ ಹುಡುಗಿಯ ಯೋಚನೆ, ಸಮಯ ಸಿಕ್ಕಾಗ ಫೋನಿನಲ್ಲಿ ಮದುವೆಯ ಬಗ್ಗೆ ಚರ್ಚೆ. ಕಾರ್ಯಕ್ರಮಗಳು ಏನು ನಡೆಯುತ್ತವೆ ಎನ್ನುವ ಬಗ್ಗೆ ಇಬ್ಬರೂ ವಿಸ್ತೃತ ವರದಿಯ ವಿನಿಮಯ. ತಂದೆ ಲಕ್ಷ್ಮೀಕಾಂತನಿಗೆ ಎಲ್ಲಾ ವ್ಯವಸ್ಥೆಯ ಬಗ್ಗೆ ಚಿಂತೆ. ಅತ್ತಿಂದಿತ್ತ ಓಡಾಡುತ್ತಾ ಎಲ್ಲರ ಮೇಲೆ ಹರಿಹಾಯುತ್ತ, ಎಲ್ಲರಿಗೂ ಟೆನ್ಷನ್ ಬರಿಸಿ ಸ್ವಲ್ಪ ಟೀ ಕೊಡಿ ಅಂತ ಕುರ್ಚಿಯ ಮೇಲೆ ಕೂಡುತ್ತಾನೆ. ಮಗ ಮತ್ತು ಮಗಳು ಆಗಾಗ ಬಂದು ' ಅಪ್ಪ ನೀನು ಸುಮ್ಮನೆ ಕೂಡು. ಏನು ಕೆಲಸ ಆಗಬೇಕು ಹೇಳು, ನಾವು ನೋಡುತ್ತೇವೆ. ಸುಮ್ಮನೆ ನೀನು ಟೆನ್ಷನ್ ಮಾಡಿಕೊಂಡು ನಮಗೂ ಟೆನ್ಷನ್ ಕೊಡಬೇಡ '. 'ನಿಮಗೆ ಏನು ಗೊತ್ತಾಗುತ್ತೆ, ಲಗ್ನಪತ್ರಿಕೆ ಎಲ್ಲರಿಗೂ ಮುಟ್ಟಿಲ್ಲ, ಅವರಿಗೆ ಫೋನ್ ಮಾಡಬೇಕು, ಮೆಸೇಜ್ ಕಳಿಸಬೇಕು, ನನ್ನ ಡ್ರೆಸ್ ಇನ್ನೂ ಬಂದಿಲ್ಲ'. ' ಇನ್ನೂ ಬಹಳ ಕೆಲಸ ಬಾಕಿ ಇವೆ ಒಬ್ಬರಿಗೂ ಸೀರಿಯಸ್ ಅನ್ನೋದೇ ಇಲ್ಲ. ಅಷ್ಟರಲ್ಲಿ ಟೀ ತಂದ ಹೆಂಡತಿ ಗಿರಿಜಾ, ' ಮಕ್ಕಳು ಎಲ್ಲಾ ನೋಡಿಕೊಳ್ಳುತ್ತಾರೆ, ನೀವು ಸುಮ್ಮನೆ ಇದ್ದರೆ ಅದೇ ಒಂದು ಉಪಕಾರ, ಈಗ ಟೀ ಕುಡಿಯಿರಿ '. ಎಂದು ಲಗುಬಗೆಯಿಂದ ಹೋರಡುತ್ತಾ ' ನನಗೆ ಸಾವಿರ ಕೆಲಸ ಬಿದ್ದಿವೆ ಮದ್ಯದಲ್ಲಿ ಇವರದೊಂದು ಗೋಳು ' ಅಂತ ವಟಗುಟ್ಟುತ್ತಾ ರೂಮಿನ ಕಡೆ ಹೊರಟಳು.

ಅಲ್ಲಿ ಓರಗಿತ್ತಿಯರಾದ ಕವಿತಾ ಮತ್ತು ಪದ್ಮಿನಿ, ನಾದಿನಿ ಸರಸ್ವತಿಯರು ಹೆಸರು ಉಂಡೆ, ಬೇಸನ್ ಉಂಡೆ, ಚಕ್ಕುಲಿ, ಮೆಂತೆ ಹಿಟ್ಟು, ಚಟ್ನಿಪುಡಿ ಮತ್ತು ಅವಲಕ್ಕಿಯನ್ನು ಪುಟ್ಟಿಗಳಲ್ಲಿ, ಡಬ್ಬಿಗಳಲ್ಲಿ ಇಟ್ಟುಕೊಂಡು ಕಾಯುತ್ತಿದ್ದರು. ಆಗ ಅಲ್ಲಿಗೆ ಕವಿತಾಳ ಗಂಡ ಜಗದೀಶ ಬಂದು ' ಹೆಂಗಸರೆಲ್ಲ ಸೇರಿ ತಿಂಡಿಯ ಪುಟ್ಟಿ ಖಾಲಿ ಮಾಡುತ್ತಾ ಇದ್ದೀರಾ, ಪದ್ಮಿನಿ ಆಗಲೇ ಒಂದು ಪುಟ್ಟಿ ಉಂಡೆ ಖಾಲಿ ಮಾಡೀಯ' ಅಂತ ಸೊಸೆಯ ಕಾಲೆಳೆದ. ಅವಳೂ ಜೋರು ' ಹೂಂ, ಮಾವ ಮಗನ ಮದುವೆಯಲ್ಲಿ ನಮಗೆ ಏನೂ ಕೊಡಿಸಲಿಲ್ಲ ಅದಕ್ಕೆ ಸಿಕ್ಕಿದ್ದು ತಿನ್ನುತ್ತಾ ಇದ್ದೀವಿ ' ಅಂದಳು. ' ತಂದಿದ್ದೆಲ್ಲ ನಿಮ್ಮ ಅಕ್ಕ ತಂಗಿಯರ ಕೈಯಲ್ಲಿ ಹಾಕಿದ್ದಾರೆ. ಎಲ್ಲಾ ನಿಮ್ಮದೇ ಆಟ ' ಅಂತ ನಾದಿನಿ ಸರಸ್ವತಿ ಅಣ್ಣನ ಪರ ವಹಿಸಿ ಚುಚ್ಚಿದಳು. ಕವಿತಾ ಗಂಡನ ಕುರಿತು ' ಉದ್ರಿ ಮಾತು ಬೇಡ, ಇಲ್ಲಿಗೆ ಏಕೆ ಬಂದಿರಿ, ಟೀ ಬೇಕಿತ್ತಾ ' ಎಂದು ಗಂಡನನ್ನು ಕೇಳಿದಳು.

' ಟೀ ಏನು ಬೇಡ, ನಿಮಗೆ ಕೆಲಸದಲ್ಲಿ ಸಹಾಯ ಮಾಡಲು ಬಂದೆ ' ಅನ್ನುತ್ತಿದ್ದಂತೆ ಕವಿತಾ ' ನಿಮ್ಮ ಸಹಾಯ ಬೇಡ, ಅದರಿಂದ ನಮಗೆ ತೊಂದರೆ. ನೀವು ಮಾಡಿದ ಕೆಲಸ ಮತ್ತೆ ನಾವು ಮಾಡಿಕೊಳ್ಳಬೇಕು ನೀವು ಸುಮ್ಮನೆ ಕೂಡ್ರಿ'. ಅಷ್ಟರಲ್ಲಿ ಸರಸ್ವತಿ ಅಣ್ಣನ ಪರವಹಿಸಿ ' ಅಣ್ಣ ಸಹಾಯ ಮಾಡಲು ಬಂದರೆ ಬೇಡ ಅಂತೀರಿ, ನೀ ಬಾ ಅಣ್ಣ ' ಅಂತ ಕರೆದಳು. ಜಗದೀಶ ರೂಮಿನ ಒಳಗೆ ಹೋಗಿ ಜಾಗ ಮಾಡಿಕೊಂಡು ಹೆಂಡತಿಯ ಪಕ್ಕದಲ್ಲಿ ಕುಳಿತ. ಎಲ್ಲರೂ ಕವರಿನಲ್ಲಿ ಹೆಸರು ಉಂಡೆ, ಬೇಸನ್ ಉಂಡೆ, ಚಕ್ಕುಲಿ, ಮೆಂತೆ ಹಿಟ್ಟು, ಚಟ್ನಿ ಪುಡಿ ಮತ್ತು ಅವಲಕ್ಕಿ ಚೂಡಾ ಹಾಕಿ ಗಂಟನ್ನು ರೆಡಿ ಮಾಡಲು ಕುಳಿತರು. ಅಲ್ಲಿಗೆ ಬಂದ ಮನೆಯ ಹಿರಿಯಜ್ಜಿ ಲಕ್ಷ್ಮೀಕಾಂತನ ತಾಯಿ ಕಿಟ್ಟಮ್ಮ ' ಎಲ್ಲರೂ ಒಂದೇ ಕೋಣೆಯಲ್ಲಿ ಕುಳಿತು ಹರಟೆ ಹೊಡೆಯುತ್ತಿದ್ದೀರಾ ' ಎನ್ನುತ್ತಾ ಒಳಗೆ ಬಂದರು. ಕವಿತಾ ' ಅತ್ತೆ ಸುಮ್ಮನೆ ಕುಳಿತಿಲ್ಲ ' ಬಳಗದ ಗಂಟು ' ಕಟ್ಟುತ್ತಾ ಇದ್ದೇವೆ ' ಅಂದಳು. ಈಗ ಶಾಕ್ ಆಗುವ ಸರದಿ ಕಿಟ್ಟಮ್ಮನದು. ' ಏನು ಬಳಗದ ಗಂಟು ಸಿದ್ದಮಾಡುತ್ತಿದ್ದೀರ ' ಅಂತ ಕೇಳಿದಳು.

' ಹೌದು ಅತ್ತೆ ' ಅಂತ ಗಿರಿಜಾ ಹೇಳಿದಳು. ' ಒಳ್ಳೆಯ ಕೆಲಸ ಈಗೀಗ ಯಾರೂ ಬಳಗದ ಗಂಟು ಮಾಡಿ ಕೊಡಲ್ಲ ' ಅನ್ನುತ್ತಾ ಅಲ್ಲೇ ಇದ್ದ ಕುರ್ಚಿಯ ಮೇಲೆ ಕುಳಿತರು. ಜಗದೀಶನಿಗೆ ಈ ಬಳಗದ ಗಂಟಿನ ಬಗ್ಗೆ ಪೂರ್ಣ ಅರಿವಿರಲಿಲ್ಲ. ಮದುವೆಯಲ್ಲಿ ಕಾರ್ಯಕ್ರಮ ಮುಗಿದ ಮೇಲೆ ಹೋಗಿ ಬರುತ್ತೇನೆ ಎಂದು ಹೇಳಿದವರಿಗೆ ಬಟ್ಟೆ ಉಡುಗೊರೆ ಜೊತೆಗೆ ಉಂಡಿ ಅವಲಕ್ಕಿ ಬಂಧುಗಳಿಗೆ ಮತ್ತು ಆತ್ಮೀಯರಿಗೆ ಕೊಡುವುದು ಸಾಮಾನ್ಯ. ಈಗೀಗ ರಿಟರ್ನ್ ಗಿಫ್ಟ್ ಅಂತ ಏನಾದರೂ ವಸ್ತುಗಳನ್ನು ಸ್ನೇಹಿತರಿಗೆ ಮತ್ತು ಉಳಿದವರಿಗೆ ಕೊಡುತ್ತಾರೆ. ಈ ' ಬಳಗದ ಗಂಟು ' ಅನ್ನುವದು ವಿಶೇಷ ಅನ್ನಿಸಿತು. ಅದು ಈಗ ಮರೆಯಾಗಿದೆ. ಕೆಲವರು ಇದಕ್ಕೆ ದಾರಿ ಬುತ್ತಿ ಅಂತ ಕರೆಯುತ್ತಾರೆ. ಇನ್ನೂ ಕೆಲವರು ಫಲಾಹಾರ ಕಟ್ಟಿ ಕೊಡು ಅನ್ನುತ್ತಾರೆ. ಈಗಲೂ ಬುತ್ತಿ ಕಟ್ಟಿ ಕೊಡುವ ಸಂಪ್ರದಾಯ ಇದೆಯಾದರೂ ಬಳಗದ ಗಂಟು ಅನ್ನುವ ಆತ್ಮೀಯತೆ ತುಂಬಿದ ಪದ ಬಳಕೆ ಇಲ್ಲ ಅನ್ನುವಷ್ಟು ಕಡಿಮೆ. ವಾಹನಗಳ ಉಪಯೋಗ ಮತ್ತು ದಾರಿಯಲ್ಲಿ ಸಿಗುವ ಹೋಟೆಲುಗಳು ಬುತ್ತಿಯ ಅವಶ್ಯಕತೆಯನ್ನು ಮರೆಮಾಚಿಸಿವೆ.

ಇದರ ವಿಶೇಷ ತಿಳಿದುಕೊಳ್ಳಲು ಜಗದೀಶ ಅಮ್ಮ ಕಿಟ್ಟಮ್ಮನನ್ನು ಕೇಳಿದ. 'ಅಮ್ಮ ಈ ಬಳಗದ ಗಂಟು ಮೊದಲು ಹೇಗೆ ಇರುತ್ತಿತ್ತು. ನಿಮ್ಮ ಕಾಲದಲ್ಲಿ ಹೇಗೆ ಕೊಡುತ್ತಿದ್ದರು '. ಬಳಗದ ಗಂಟಿನ ವಿಶೇಷ ತಿಳಿಯಲು ಎಲ್ಲರ ಲಕ್ಷ ಅಮ್ಮನೆಡೆಗೆ. ಅಮ್ಮ ಹೇಳಿದ್ದು ' ನನ್ನ ಅಪ್ಪ ಊರಲ್ಲಿ ದೊಡ್ಡ ಕುಳ, ಕುಲಕರ್ಣಿ. ದೊಡ್ಡ ಎಂಟು ಅಂಕಣದ ಮನೆ, ಆಳು ಕಾಳು , ದನಗಳು ಮನೆ ತುಂಬ. ನಮ್ಮ ಮದುವೆ ಕಾಲದಲ್ಲಿ ಹದಿನೈದು ದಿನ ಕಾರ್ಯಕ್ರಮಗಳು. ಸುಣ್ಣ, ಬಣ್ಣ, ಸಜ್ಜೆ ಮುಹೂರ್ತದಿಂದ ಶುರು. ಬಟ್ಟೆ ಬಂಗಾರ ಖರೀದಿ, ಕಿರಾಣಿ ಖರೀದಿ ಎಲ್ಲದಕ್ಕೂ ಎಲ್ಲರೂ ಸೇರಿ ಹೋಗುತ್ತಿದ್ದೆವು. ದುಡ್ಡು ಹೆಚ್ಚು ಇರುತ್ತಿರಲಿಲ್ಲ ಆದರೆ ಜನ ಹೆಚ್ಚು ಇರುತ್ತಿದ್ದರು.

ಹದಿನೈದು ದಿನ ಮನೆಯಲ್ಲಿ ಇಪ್ಪತ್ತರಿಂದ ಮೂವತ್ತು ಜನರು ಇದ್ದು ಕೆಲಸ ಮಾಡುತ್ತಿದ್ದರು. ಎಲ್ಲರೂ ತಮ್ಮ ಮನೆಯ ಮದುವೆಯಂತೆ ಸಂಭ್ರಮದಿಂದ ಭಾಗವಹಿಸುತ್ತಿದ್ದರು. ವಗ್ಗರಣೆ, ಮಂಡಾಳು ಚೂಡಾ, ಚಹಾ ಸಮಾರಾಧನೆ ಜೋರಾಗಿ ಇರುತ್ತಿತ್ತು. ತಮಾಷೆ ಕಾಲೆಳೆಯುವುದು ಮಜವಾಗಿರುತ್ತಿತ್ತು. ಗಂಡಸರು ಹೊರಗಿನ ಕೆಲಸ ನೋಡಿಕೊಂಡರೆ ಹೆಂಗಸರ ಕಾರುಬಾರು ಮನೆಯ ಒಳಗೆ. ಆಗ ಊರಿಂದ ಊರಿಗೆ ಹೋಗಲು ಕಾಲು ನಡಿಗೆ ಅಥವಾ ಬಂಡಿಯೇ ಆಧಾರ. ಬಂಧುಗಳ ದೂರದ ಊರಿಂದ ಬರುವಾಗ ಬಂಡಿಯಲ್ಲೇ ಬರುತ್ತಿದ್ದರು. ಟ್ರಾಕ್ಟರುಗಳು ಜೀಪುಗಳು ನಂತರ ಬಂದವು. ಆಗ ಖಾಸಗಿ ಬಸ್ಸುಗಳು ಹಳ್ಳಿಗೆ ಬರುತ್ತಿರಲಿಲ್ಲ. ಮದುವೆಗೆ ಬರುವಾಗ ಬುತ್ತಿ ಕಟ್ಟಿಕೊಂಡು ದಾರಿಯಲ್ಲಿ ನೀರು ನೆರಳು ಇರುವ ಜಾಗದಲ್ಲಿ ಊಟ, ವಿಶ್ರಾಂತಿ ಮಾಡಿಕೊಳ್ಳುತ್ತಾ ಬರುತ್ತಿದ್ದರು. ಎತ್ತುಗಳಿಗೂ ವಿಶ್ರಾಂತಿ ಸಿಗುತ್ತಿತ್ತು. ನನ್ನ ಮದುವೆಯಲ್ಲಿ ವಾರದ ಮೊದಲು ಎಂಟು ಬಂಡಿಗಳು ಮದುವೆಯ ದಿನ ಹತ್ತು ಬಂಡಿಗಳು ಬಂದಿದ್ದವು. ಮನೆಯಲ್ಲಿ, ಓಣಿಯಲ್ಲಿ, ಊರಲ್ಲಿ ಸಂಭ್ರಮವೋ ಸಂಭ್ರಮ. ಮದುವೆ ಮುಗಿದ ಮೇಲೆ ದೂರದ ಊರಿಗೆ ಹೋಗುವ ಬಂದು ಬಾಂಧವರಿಗೆ ಮತ್ತು ಎಲ್ಲಾ ಬಳಗದವರಿಗೆ ಉಡುಗೊರೆಯ ಜೊತೆಗೆ ಊಟದ ಬುತ್ತಿ ಕಟ್ಟಿಕೊಡುತ್ತಿದ್ದರು. ಆಗ ಬುತ್ತಿಗಾಗಿಯೇ ಬೇರೆ ತಿಂಡಿ ತಿನಿಸು ಮಾಡಿ ಕಟ್ಟುತ್ತಿದ್ದರು.

ಪ್ರೀತಿ ಮತ್ತು ಕಾಳಜಿಯಿಂದ ಕೊಡುತ್ತಿದ್ದರು. ಅದೇ ಒಂದು ವಿಶೇಷ. ಅದೇ ' ಬಳಗದ ಗಂಟು '. ಎಲ್ಲರಿಗೂ ತಪ್ಪದೇ ಕೊಡಬೇಕು ಮರೆತರೆ ಆಡಿಕೊಳ್ಳುತ್ತಾರೆ. ಅದರಲ್ಲೂ ಬಳಗದವರಿಗೆ ತಪ್ಪದೆ ಕೊಡಬೇಕು. ಕೊಡದಿದ್ದರೆ ಅವಮಾನ ಅಂದುಕೊಳ್ಳುತ್ತಾರೆ, ಜಗಳಗಳೂ ಆಗುತ್ತವೆ.

ನಮ್ಮ ಊರಿನ ಜೋಯಿಸರ ಮನೆಯ ಮದುವೆಯಲ್ಲಿ ತಂಗಿಯ ಮನೆಯವರಿಗೆ ಬಳಗದ ಗಂಟು ಕೊಡಲಿಲ್ಲ ಅಂತ ಜಗಳ ಮಾಡಿ ಈಗ ಮಾತು ಬಿಟ್ಟಿದ್ದಾರೆ. ಬಳಗದ ಗಂಟು ಪ್ರೀತಿ, ಆತ್ಮೀಯತೆಯ ಸಂಕೇತದಂತೆ ಜಗಳ ದ್ವೇಷದ ಕಾರಣವೂ ಆಗುತ್ತಿತ್ತು. ಇನ್ನೂ ಹೇಳುವುದಕ್ಕೆ ಬಹಳಷ್ಟು ಇದೆ, ಈಗ ಸಾಕು . ಮೊದಲು ಬೇಗ ಬೇಗ ಕೆಲಸ ಮುಗಿಸಿ ಎನ್ನುತ್ತಾ ಕಿಟ್ಟಮ್ಮ ಎದ್ದು ಹೊರಟರು.

ಅಷ್ಟರಲ್ಲಿ ಗಂಟು ಸಿದ್ದಮಾಡುವ ಕೆಲಸ ಮುಗಿದಿತ್ತು. ಅತ್ತೆ ತಮ್ಮ ಕೆಲಸ ಮೆಚ್ಚಿಕೊಂಡಿದ್ದಕ್ಕೆ ಸೊಸೆಯಂದಿರಿಗೆ ಖುಷಿ.

ಬಳಗದ ಗಂಟು ಈಗ ಎಲ್ಲರಿಗೂ ವಿಶೇಷವಾಗಿ ಕಾಣಿಸುತ್ತಿತ್ತು. ಪ್ರತಿಸಲ ಕಾಟಾಚಾರಕ್ಕೆ ತೆಗೆದುಕೊಂಡು ಹೋಗುತ್ತಿದ್ದದ್ದು ಈ ಬಾರಿ ಹೊಸದಾಗಿ ಕಾಣುತ್ತಿತ್ತು. ಎಲ್ಲಾ ಗಂಟುಗಳನ್ನು ಜೋಪಾನವಾಗಿ ಡಬ್ಬಿಗಳಲ್ಲಿ ಸೇರಿಸಿ ಬಿಸಿ ಬಿಸಿ ಚಹಾ ಕುಡಿಯಲು ಎಲ್ಲರೂ ಅಡಿಗೆ ಮನೆಯತ್ತ ಹೊರಟರು.



ಜನಾರ್ಧನ ರಾವ್

# ಕನ್ನಡದ ಕಟ್ಟಾಳು ಮಾತಿನ ಮನೆ ರಾ.ಸು.ವೆಂಕಟೇಶ

ಕನ್ನಡದ ಸಾರಸ್ವತ ಲೋಕಕ್ಕೆ ಹಲವಾರು ಹಿರಿಯ ದಿಗ್ಗಜ ಸಾಹಿತಿಗಳ ಕೊಡುಗೆ ಅಪಾರವಾಗಿದೆ. ಇಂತಹ ದಿಗ್ಗಜರ ಸಾಲಿನಲ್ಲಿ ಕಾಣುವ "ಕನ್ನಡ ಸಾಹಿತ್ಯ ಪ್ರೇಮಿ ಆತ್ಮೀಯರಾದ ಶ್ರೀ ರಾ.ಸು.ವೆಂಕಟೇಶ ಅವರು. ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮನದುಂಬಿ ಪ್ರೋತ್ಸಾಹ ನೀಡುವ ಎಲ್ಲರ ಆಪ್ತಮಿತ್ರ.

ಶ್ರೀ ರಾ.ಸುಬ್ಬರಾವ್ ಮತ್ತು ಶ್ರೀಮತಿ ರಂಗಮ್ಮ ದಂಪತಿಗಳ ಎರಡನೇ ಸುಪುತ್ರರಾಗಿ ಮಾರ್ಚ್ 8 ರಂದು ಚಾಮರಾಜಪೇಟೆಯಲ್ಲಿ ಜನಿಸಿದರು. ಇವರ ಪತ್ನಿ ಶೈಲಜಾ ವೆಂಕಟೇಶ. ಮಗ ಸೊಸೆ ಶಿಶಿರ, ಅರ್ಪಿತ.

ಇವರು ಶಾಲಾ ದಿನಗಳಿಂದಲೇ ಕನ್ನಡ ಭಾಷೆಯ ಬಗ್ಗೆ ಅಪಾರ ಒಲವನ್ನು ಹೊಂದಿದ್ದ ಬಾಲಕ. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಇವರದೇ ಬಹುಪಾಲು ಕೊಡುಗೆ ಇರುತ್ತಿತ್ತು ಎನ್ನುವುದನ್ನು ಅಂದಿನ ಇವರ ಶ್ರೀ ರಾಮಮಂದಿರ ಶಾಲೆಯ ಗುರುಗಳು ಇಂದಿಗೂ ನೆನಪಿಸಿಕೊಳ್ಳುವುದು ರಾ.ಸು ಅವರ ಅದೃಷ್ಟ.

ಬೆಂಗಳೂರು ದೂರದರ್ಶನದಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿದ್ದಾರೆ. ಕನ್ನಡದ ಕೆಲಸ ಕಾರ್ಯಗಳಿಗೆ ಮತ್ತಷ್ಟು ಉತ್ತೇಜನ ಸಿಕ್ಕಂತಾಗಿ ಚಿಲುಮೆಯ ಬುಗ್ಗೆಯಂತೆ ಚಟುವಟಿಕೆಯಿಂದ ಕೂಡಿರುವ ವ್ಯಕ್ತಿ.

ಇವರ ಸಾಹಿತ್ಯ, ಸಾಂಸ್ಕೃತಿಕ, ಪತ್ರಿಕೋದ್ಯಮ, ಸಾಮಾಜಿಕ ಹಾಗೂ ಶೈಕ್ಷಣಿಕವನ್ನು ಒಳಗೊಂಡ ಕ್ಷೇತ್ರಗಳ ವ್ಯಾಪ್ತಿ ಬಹಳ ವಿಸ್ತಾರವಾದದ್ದು. ಇವರ ಪ್ರಪ್ರಥಮ ಬರಹ ಪ್ರಕಟವಾದದ್ದು 1978ರಲ್ಲಿ. ಇವರ ಕಾವ್ಯ ನಾಮ 'ಮಿತ್ರಪ್ರಿಯ'. ಇಂದು ತಮ್ಮ ಮನೆಯ ಮಹಡಿಯ ಮೇಲೆ ಸಾಹಿತ್ಯ/ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿಯೇ "ಮಾತಿನ ಮನೆ" ಎಂಬ ಕನ್ನಡದ ಮನೆಯನ್ನು ಹಲವಾರು ಸಾಹಿತ್ಯ ಪ್ರೇಮಿಗಳಿಗೆ ಹಾಗೂ ಕಾರ್ಯಕ್ರಮದ ಆಯೋಜಕರಿಗೆ ಉಪಯೋಗವಾಗುವಂತೆ



ನಿಸ್ವಾರ್ಥದಿಂದ ನಿರ್ಮಿಸಿದ್ದಾರೆ.

ಹಲವಾರು ಸಂಘ ಸಂಸ್ಥೆಗಳಲ್ಲಿ ಗುರುತಿಸಿಕೊಂಡು ಸದಾ ಕ್ರಿಯಾಶೀಲರಾಗಿರುವ ಸಹೃದಯ ಮನಸ್ಸು ಆರ್.ಎಸ್.ವಿ ಯವರದು. ಕನ್ನಡ ನಾಡು ನುಡಿಯ ಬಗ್ಗೆ ಕಾಳಜಿ ಇರುವ ಇವರಿಗೆ ಕನ್ನಡೇತರರಿಗೆ ಕನ್ನಡ ಕಲಿಸಿದ ಸಂತಸವೂ ಇದೆ. ಇವರಂತೆ ಇವರ ಮನವೂ ಸಹ ಕನ್ನಡ ಕನ್ನಡ ಎಂಬ ಹರಿಯುವ ನದಿಯಂತೆ ಲವಲವಿಕೆಯಿಂದ ಇರುತ್ತದೆ.

ರಾ. ಸು. ವೆಂಕಟೇಶ ಅವರು ಹವ್ಯಾಸಿ ಸಾಹಿತ್ಯಕ ಮಾಸಿಕ ಪತ್ರಿಕೆಯ ಸಂಪಾದಕರಾಗಿ, ಲೇಖಕರ ಬಳಗದ ಅಧ್ಯಕ್ಷರಾಗಿ, ಹವ್ಯಾಸಿ ಪ್ರಕಾಶನದ ಸ್ಥಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು 'ಕಲೋಪಾಸಕರು' ನಾಟಕ ಸಂಸ್ಥೆಯ ಸಂಸ್ಥಾಪಕರಾಗಿದ್ದು, ಹಲವಾರು ರಾಜ್ಯ ಮಟ್ಟದ ನಾಟಕ ಸ್ಪರ್ಧೆಗಳಲ್ಲಿ, ಭಾಗಿಯಾಗಿ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಹವ್ಯಾಸಿ ಪ್ರಕಾಶನದಿಂದ ಹಲವಾರು ಕೃತಿಗಳು ಪ್ರಕಟವಾಗಿ ಓದುಗರ ಕೈಸೇರಿದೆ.

ರಾ. ಸು. ವೆಂಕಟೇಶ ಅವರು 1980ರ ಸುಮಾರಿನಲ್ಲಿ ಕೆಂಪೇಗೌಡ ನಗರ ನಾಗರೀಕರ ಸಂಘಟನೆ ಹುಟ್ಟು ಹಾಕಿದರು. ಮುಂದೆ ಜನಮುಖಿ ವಿಚಾರ ವೇದಿಕೆ, ಜನಮುಖಿ ಪ್ರಕಾಶನಗಳನ್ನು ನಡೆಸಿದರು. ಕನ್ನಡ ಸಾಹಿತ್ಯ ಪರಿಷತ್ ಚಾಮರಾಜಪೇಟೆ ಘಟಕದ ಕಾರ್ಯದರ್ಶಿಯಾಗಿ ಮೂರು ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದರು. ಮೂರೂ ಸಮ್ಮೇಳನಗಳ ಸ್ಮರಣ ಸಂಚಿಕೆಗಳ ಸಂಪಾದಕರಾಗಿ ಕಾರ್ಯನಿರ್ವಹಿಸಿದ ಸಾಧನೆ ಇವರದ್ದು.

ಇವರು ಕಥೆ, ಕವನ, ವಿಮರ್ಶೆ, ಸಂದರ್ಶನ, ಲೇಖನ, ಪದಬಂಧ ಹೀಗೆ ಹಲವು ಬಗೆಯ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬೆಂಗಳೂರು ಹೈಸ್ಕೂಲ್ ಹೈಕ್ಳು ಸಂಘಟನೆಯಲ್ಲಿ 700 ಕ್ಕೂ ಹೆಚ್ಚು ಹಿರಿಯ ವಿದ್ಯಾರ್ಥಿಗಳನ್ನು ಸಂಘಟಿಸಿ ಒಂದೇ ವೇದಿಕೆಯಲ್ಲಿ 40 ಮಂದಿ ನಿವೃತ್ತ ಶಿಕ್ಷಕರಿಗೆ 'ನ ಭೂತೋ ನ ಭವಿಷ್ಯತಿ' ಎಂಬಂತೆ ಗುರುನಮನ ಅರ್ಪಿಸಿದ ಹೆಗ್ಗಳಿಕೆ ಇವರದು. ಶ್ರೀ ರಾಮಮಂದಿರ ಶಾಲೆಯ ಅಮೃತ ಮಹೋತ್ಸವಗಳಂತಹ ಕಾರ್ಯಕ್ರಮಗಳ ಯಶಸ್ಸಿಗೂ ಕಾರಣರಾಗಿದ್ದಾರೆ.

ಬೆಂಗಳೂರು ನಗರ ಕನ್ನಡ ಸಾಹಿತ್ಯ ಪರಿಷತ್ತು




ವತಿಯಿಂದ ಕನ್ನಡ ಸೇವಾ ರತ್ನ ಪುರಸ್ಕೃತರು. ಸಾಮಾಜಿಕ ಕಳಕಳಿಗಾಗಿ ಲಯನ್ಸ್ ಪ್ರಶಸ್ತಿ ಪುರಸ್ಕೃತರು. ಇನ್ನೂ ಅನೇಕ ಪ್ರಶಸ್ತಿ, ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಇವರ ಎರಡು ಕೃತಿಗಳು "ಚಿತ್ತದೊಳಗೊಂದು ಸುತ್ತು" ಮತ್ತು "ಹೃದ್ಗತ" ಕೃತಿಗಳು. ರೆಕ್ಕೆ ಮುರಿದ ಹಕ್ಕಿ ಕಿರುಚಿತ್ರಕ್ಕೆ ಸಾಹಿತ್ಯ ರಚಿಸಿ, ಅದರ ಹಿನ್ನೆಲೆ ಧ್ವನಿಗಾಗಿ ರಾಷ್ಟ್ರೀಯ ಪುರಸ್ಕಾರ ಪಡೆದಿದ್ದಾರೆ.

ತಮ್ಮ ಮಾತಿನ ಮನೆಯಲ್ಲಿ ನಲ್ವತ್ತು ಜನ ಸೇರಬಹುದಾದ ಸಭಾಂಗಣ/ವೇದಿಕೆಯಲ್ಲಿ ಪ್ರತಿ ತಿಂಗಳು 2/3 ಸಾಹಿತ್ಯ , ಸಾಂಸ್ಕೃತಿಕ ಹಾಗೂ ಹಾಸ್ಯ ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ. ಕಳೆದ 5 ವರ್ಷಗಳಲ್ಲಿ 115 ಕಾರ್ಯಕ್ರಮಗಳನ್ನು ನಡೆಸಿದ ಹೆಗ್ಗುರುತಿಗೆ ಪಾತ್ರವಾಗಿದೆ. ಎಲೆಮರೆಯ ಕಾಯಿಗಳಂತಿರುವ ಸಾಹಿತಿಗಳಿಗೆ ಗೌರವ ಸನ್ಮಾನಗಳನ್ನು ನೀಡುತ್ತಾ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಸಾಗುತ್ತಿದ್ದಾರೆ. ಮಾತಿನ ಮನೆಯ ಕಾರ್ಯಕ್ರಮಗಳಿಗೆ ಹಲವಾರು ಪ್ರಮುಖ ಸಾಹಿತಿಗಳು, ಪತ್ರಕರ್ತರು ಹಾಗೂ ಇನ್ನಿತರರು ಪಾಲ್ಗೊಂಡು ತಮ್ಮ ಸಂತಸವನ್ನು ಹಂಚಿಕೊಳ್ಳುತ್ತಾರೆ. ಮಾತಿನ ಮನೆಯ ಒಡನಾಟದಲ್ಲಿ ಇದ್ದ ಕನ್ನಡದ ಹೆಮ್ಮೆಯ ನಿರೂಪಕಿ ದಿ.ಅಪರ್ಣ ವಸ್ತಾರೆ ಅವರು ಪ್ರಮುಖವಾಗಿ ನಿಲ್ಲುತ್ತಾರೆ. "ಕಲ್ಲಾಂದ್ರೆ ನಾನು ಬೇಲೂರಿನ ಗುಡಿಯಲಿ ಇರುವೆ, ಮಗುವಾದರೆ ಕಾವೇರಿಯ ಮಡಿಲಲಿ ಇರುವೆ" ಎನ್ನುವ ಮಾತುಗಳಿಗೆ ಪೂರಕವಾಗಿ ಇರುವ ರಾ.ಸು.ವೆಂಕಟೇಶ ಅವರಿಗೆ ಶುಭವಾಗಲಿ.

ಸಾಹಿತ್ಯ ಪ್ರೇಮಿ, ಪ್ರೋತ್ಸಾಹಿ, ಉತ್ಸಾಹಿ ಹಾಗೂ ಕ್ರಿಯಾಶೀಲ ಕನ್ನಡ ಸಹೃದಯಿ ರಾ.ಸು.ವೆಂಕಟೇಶ ಅವರಿಂದ ಮತ್ತಷ್ಟು ಕಾರ್ಯಕ್ರಮಗಳು ಹೊಮ್ಮಲಿ ಮಾತಿನ ಮನೆ ನಂದಾದೀಪದಂತೆ ಬೆಳಗುತಿರಲಿ.



ಡಾ.ಆರ್.ಶೈಲಜ ಶರ್ಮ, ಬೆಂಗಳೂರು.

ವರ್ತಮಾನ



# ಕನ್ನಡ ನಾಡು - ನುಡಿ ಹಬ್ಬ

ಬಾರಿಸು ಕನ್ನಡ ಡಿಂಡಿಮವ





# ಸುವರ್ಣಯುಗಕ್ಕೆ ಮುನ್ನುಡಿ ಬರೆದ ದೊರೆ ಧೃವ ಧಾರಾವರ್ಷ

**ಜೇನಿನ ಹೊಳೆಯೊ ಹಾಲಿನ ಮಳೆಯೊ**
**ಸುಧೆಯೊ ಕನ್ನಡ ಸವಿ ನುಡಿಯೊ**

**ಜೇನಿನ ಹೊಳೆಯೊ ಹಾಲಿನ ಮಳೆಯೊ**
**ಸುಧೆಯೊ ಕನ್ನಡ ಸವಿ ನುಡಿಯೊ**
**ವಾಣಿಯ ವೀಣೆಯ ಸ್ವರ ಮಾಧುರ್ಯವೊ**
**ಸುಮಧುರ ಸುಂದರ ನುಡಿಯೊ ... ಆಹ**

**ಕುಮಾರ ವ್ಯಾಸನ ಕಾವ್ಯದ ಚಂದ**
**ಕವಿ ಸರ್ವಜ್ಞನ ಪದಗಳ ಅಂದ**
**ಕುಮಾರ ವ್ಯಾಸನ ಕಾವ್ಯದ ಚಂದ**
**ಕವಿ ಸರ್ವಜ್ಞನ ಪದಗಳ ಅಂದ**
**ದಾಸರು ಶರಣರು ನಾಡಿಗೆ ನೀಡಿದ**
**ಭಕ್ತಿಯ ಗೀತೆಗಳ ಪರಮಾನಂದ**
**ರನ್ನನು ರಚಿಸಿದ ಹೊನ್ನಿನ ನುಡಿಯು**
**ಪಂಪನು ಹಾಡಿದ ಚಿನ್ನದ ನುಡಿಯು**
**ಕನ್ನಡ ತಾಯಿಯು ನೀಡಿದ ವರವು**
**ಸುಮಧುರ ಸುಂದರ ನುಡಿಯೊ ... ಆಹ**



**ಕನ್ನಡದ ರಾಜ-ಮಾಹಾರಾಜರು**

ದಂತಿದುರ್ಗನು ಸ್ಥಾಪಿಸಿದ ರಾಷ್ಟ್ರಕೂಟ ಸಾಮ್ರಾಜ್ಯದ ಅತಿ ಪ್ರಮುಖ ಮತ್ತು ಪರಾಕ್ರಮಿ ದೊರೆಗಳಲ್ಲಿ ಧೃವ ಧಾರಾವರ್ಷನು (ಕ್ರಿ ಶ ಸುಮಾರು 780–793 ) ಅಗ್ರಗಣ್ಯ. ಇವನ ಸಾಧನೆಗಳು ಕನ್ನಡ ನಾಡಿನ ಕೀರ್ತಿಯನ್ನು ಇಡೀ ಭಾರತದಲ್ಲಿ ಉತ್ತುಂಗಕ್ಕೆ ಕೊಂಡೊಯ್ದವು. ಇವನನ್ನು ರಾಷ್ಟ್ರಕೂಟರ ಆಳ್ವಿಕೆಯ 'ಸುವರ್ಣ ಯುಗಕ್ಕೆ ಮುನ್ನುಡಿ' ಬರೆದ ದೊರೆ ಎಂದು ಪರಿಗಣಿಸಲಾಗುತ್ತದೆ.

ಮಹಾ ದಂಡನಾಯಕ ಧೃವ ಧಾರಾವರ್ಷ: ಅಖಂಡ ಭಾರತದ ಅಧಿಪತಿ

ಧೃವನು ತನ್ನ ಅಲ್ಪಾವಧಿಯ ಆಳ್ವಿಕೆಯಲ್ಲಿ ಮಹಾ ಮಿಂಚಿನಂತೆ ದಾಳಿಗಳನ್ನು ನಡೆಸಿ, ರಾಷ್ಟ್ರಕೂಟರ ಶಕ್ತಿಯನ್ನು ಕೇವಲ ದಕ್ಷಿಣಕ್ಕೆ ಸೀಮಿತಗೊಳಿಸದೆ, ಮೊದಲ ಬಾರಿಗೆ ಉತ್ತರ ಭಾರತದ ರಾಜಕೀಯದಲ್ಲಿ ನೇರವಾಗಿ ಹಸ್ತಕ್ಷೇಪ ಮಾಡಿದ ದಕ್ಷಿಣದ ಪ್ರಥಮ ಚಕ್ರವರ್ತಿ!

I. ರಾಜಕೀಯ ಅಧಿಪತ್ಯ: ಕರ್ನಾಟಕದಿಂದ ಕನ್ನೌಜ್‌ವರೆಗೆ

ಧೃವನ ಪ್ರಮುಖ ಮತ್ತು ಅತ್ಯಾಕರ್ಷಕ ಕೊಡುಗೆ ಎಂದರೆ, ಇಡೀ ಭಾರತದಲ್ಲಿ ರಾಷ್ಟ್ರಕೂಟರ ಪ್ರಾಬಲ್ಯವನ್ನು ಸ್ಥಾಪಿಸಿದ್ದು.

ತ್ರಿಪಕ್ಷೀಯ ಹೋರಾಟದ ನಾಯಕ: ಅಂದಿನ ಭಾರತದಲ್ಲಿ ಉತ್ತರ ಭಾರತದ ಪ್ರಬಲ ಕೇಂದ್ರವಾದ ಕನ್ನೌಜ್ ಅನ್ನು ವಶಪಡಿಸಿಕೊಳ್ಳಲು ಪಾಲರು (ಬಂಗಾಳ), ಪ್ರತಿಹಾರರು (ಗುಜರಾತ್–ರಾಜಸ್ಥಾನ) ಮತ್ತು ರಾಷ್ಟ್ರಕೂಟರು (ಕರ್ನಾಟಕ) ತ್ರಿಪಕ್ಷೀಯ ಹೋರಾಟದಲ್ಲಿ ತೊಡಗಿದ್ದರು.

ಪ್ರತಿಹಾರರ ಸದೆಬಡಿ: ಧೃವನು ಮೊದಲು ಉತ್ತರ ಭಾರತದ ಮೇಲೆ ದಂಡೆತ್ತಿ ಹೋಗಿ, ಪ್ರಬಲ ಗುರ್ಜರ–ಪ್ರತಿಹಾರ ದೊರೆ ವತ್ಸರಾಜನನ್ನು ಸೋಲಿಸಿದನು.

ಪಾಲರ ಪತನ: ನಂತರ ಬಂಗಾಳದ ದೊರೆ ಧರ್ಮಪಾಲನನ್ನೂ ಯಮುನಾ–ಗಂಗಾ ದೋಆಬ್ ಪ್ರದೇಶದಲ್ಲಿ ಸೋಲಿಸಿ, ಈ ಮೂರೂ ಪ್ರಮುಖ ಶಕ್ತಿಗಳ ನಡುವಿನ ಹೋರಾಟದಲ್ಲಿ ರಾಷ್ಟ್ರಕೂಟರ ಪಾರುಪತ್ಯವನ್ನು ಘೋಷಿಸಿದನು. ಹೀಗೆ, ದಕ್ಷಿಣದ ದೊರೆಯೊಬ್ಬನು ಉತ್ತರ ಭಾರತದ ಹೃದಯ ಭಾಗವಾದ ಕನ್ನೌಜ್‌ನ ರಾಜಕೀಯವನ್ನು ನಿಯಂತ್ರಿಸಿದ್ದು ಇತಿಹಾಸದಲ್ಲೇ ಮೊದಲು!

'ಧಾರಾವರ್ಷ' ಎಂಬ ಬಿರುದು: ಆತನಿಗೆ 'ಧಾರಾವರ್ಷ' (ಧಾರಾಕಾರ ಮಳೆ ಸುರಿಸುವವನು – ಅಂದರೆ, ಶತ್ರುಗಳ ಮೇಲೆ ನಿರಂತರವಾಗಿ ವಿಜಯದ ಮಳೆಯನ್ನು ಸುರಿಸುವವನು) ಮತ್ತು 'ನಿರುಪಮ' (ಸಾಟಿಯಿಲ್ಲದವನು) ಎಂಬ ಬಿರುದುಗಳು ದೊರೆತವು.

II. ಕನ್ನಡ ನಾಡಿನ ಪ್ರಾದೇಶಿಕ ಕೊಡುಗೆ (ದಕ್ಷಿಣ ದಿಗ್ವಿಜಯ)

ಕನ್ನಡ ನಾಡಿನ ಮೂಲ ಭೂಭಾಗವಾದ ದಕ್ಷಿಣದಲ್ಲಿ ಆತ ರಾಜಕೀಯ ಸ್ಥಿರತೆಯನ್ನು ಬಲಪಡಿಸಿದನು.

ಗಂಗವಾಡಿಗೆ ಪಾಠ: ಧೃವನು ಮೈಸೂರು ಪ್ರದೇಶವನ್ನು ಆಳುತ್ತಿದ್ದ ಪಶ್ಚಿಮ ಗಂಗರ ದೊರೆ ಎರಡನೆಯ ಶಿವಮಾರನನ್ನು ಸೋಲಿಸಿ ಬಂಧಿಸಿದನು. ನಂತರ ತನ್ನ ಮಗ ಕಂಬರಸನನ್ನು ಗಂಗವಾಡಿಗೆ (ದಕ್ಷಿಣ ಕರ್ನಾಟಕಕ್ಕೆ) ರಾಜ್ಯಪಾಲನಾಗಿ ನೇಮಿಸಿ, ಆ ಪ್ರದೇಶದ ಮೇಲೆ ರಾಷ್ಟ್ರಕೂಟರ ಸಂಪೂರ್ಣ ರಾಜಕೀಯ ನಿಯಂತ್ರಣ ಸ್ಥಾಪಿಸಿದನು. ಈ ಮೂಲಕ ದಕ್ಷಿಣ ಗಡಿಯನ್ನು ಭದ್ರಪಡಿಸಿದನು.

ಪಲ್ಲವರ ಮೇಲೆ ಅಧಿಪತ್ಯ: ಕಾಂಚೀಪುರಂನ ಪಲ್ಲವ ದೊರೆ ಎರಡನೆಯ ನಂದಿವರ್ಮನ್‌ನನ್ನು ಸೋಲಿಸಿ, ಅವರಿಂದ ಅಪಾರ ಪ್ರಮಾಣದ ಕಪ್ಪದ ರೂಪದಲ್ಲಿ ಆನೆಗಳನ್ನ ಪಡೆದನು. ಈ ಮೂಲಕ ದಕ್ಷಿಣದ ಬಹುತೇಕ ರಾಜರು ರಾಷ್ಟ್ರಕೂಟರ ಅಧೀನರಾಗುವಂತೆ ಮಾಡಿದನು.

ಖಖಖ. ಆಡಳಿತ ಮತ್ತು ಸಾಹಿತ್ಯಕ್ಕೆ ಮೂಲ ಕೊಡುಗೆ

ಆಡಳಿತಾತ್ಮಕ ಬಲವರ್ಧನೆ: ಧೃವನ ಆಳ್ವಿಕೆಯು ರಾಷ್ಟ್ರಕೂಟ ಸಾಮ್ರಾಜ್ಯದ ಆಡಳಿತವನ್ನು ಮತ್ತಷ್ಟು ಕೇಂದ್ರೀಕೃತಗೊಳಿಸಿತು. ಯುದ್ಧಗಳಿಂದ ಗಳಿಸಿದ ಸಂಪತ್ತು ಮತ್ತು ಪ್ರತಿಷ್ಠೆಯನ್ನು ಆತ ಸಾಮ್ರಾಜ್ಯದ ಆಡಳಿತ ಸುಧಾರಣೆಗೆ ಬಳಸಿದನು.

ಕನ್ನಡದ ಶಾಸನಗಳು: ಧೃವನ ಕಾಲದ ಶಾಸನಗಳು, ವಿಶೇಷವಾಗಿ ನರೇಗಲ್ ಶಾಸನವು (ಕ್ರಿ.ಶ. 780), ಹಳೆಗನ್ನಡದಲ್ಲಿ ಮೂಡಿ ಬಂದಿದ್ದು, ಆಡಳಿತದಲ್ಲಿ ಕನ್ನಡಕ್ಕೆ ನೀಡಲಾಗಿದ್ದ ಮಹತ್ವವನ್ನು ತೋರಿಸುತ್ತದೆ. ಇವನ ನಂತರ ಬಂದ ದೊರೆಗಳು ಕನ್ನಡ ಸಾಹಿತ್ಯಕ್ಕೆ ನೀಡಿದ ಮಹಾ ಕೊಡುಗೆಗೆ ಧೃವನ ಆಳ್ವಿಕೆಯು ಭದ್ರ ಬುನಾದಿ ಹಾಕಿತು.

ರಾಜಕೀಯ ದೂರದೃಷ್ಟಿ: ತನ್ನ ನಂತರದ ಆಡಳಿತಕ್ಕಾಗಿ ಸಮರ್ಥ ನಾಯಕನನ್ನು ಸಿದ್ಧಪಡಿಸಿದನು. ತನ್ನ ಕಿರಿಯ ಮತ್ತು ಸಮರ್ಥ ಮಗನಾದ ಮೂರನೆಯ ಗೋವಿಂದನನ್ನು ಯುವರಾಜನಾಗಿ ನೇಮಿಸಿದನು. ಮೂರನೆಯ ಗೋವಿಂದ ನಂತರ ರಾಷ್ಟ್ರಕೂಟರ ಅತ್ಯಂತ ಪ್ರಬಲ ಸಾಮ್ರಾಟರಲ್ಲಿ ಒಬ್ಬನಾದ.

ಧೃವ ಧಾರಾವರ್ಷನು ಕನ್ನಡ ನಾಡಿನ ರಾಷ್ಟ್ರಕೂಟ ಸಾಮ್ರಾಜ್ಯವನ್ನು ಸ್ಥಳೀಯ ಶಕ್ತಿಯಿಂದ ಅಖಿಲ ಭಾರತೀಯ ಶಕ್ತಿಯಾಗಿ ಪರಿವರ್ತಿಸಿದ ಮಹಾನ್ ಚಕ್ರವರ್ತಿ. ಉತ್ತರ ಭಾರತದ ಪ್ರಬಲ ಶಕ್ತಿಗಳನ್ನು ಸೋಲಿಸಿ, ಕನ್ನಡದ ರಾಜವಂಶವೊಂದು ಇಡೀ ಭಾರತದ ರಾಜಕೀಯದಲ್ಲಿ ನಿರ್ಣಾಯಕ ಪಾತ್ರವಹಿಸುವಂತೆ ಮಾಡಿದುದು ಇವನ ಅತ್ಯಂತ ಶ್ರೇಷ್ಠ ಕೊಡುಗೆ. ಇವನ ಮಿಂಚಿನ ದಾಳಿಗಳು ಮತ್ತು ವಿಜಯಗಳು ಕನ್ನಡ ನಾಡಿನ ವೀರ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಕೆತ್ತಲ್ಪಟ್ಟಿವೆ.

ಜೈ ತಾಯಿ ಕನ್ನಡಾಂಬೆ!



**ರೂಪ ಮಂಜುನಾಥ ಹೊಳೆನರಸೀಪುರ**

# ಲೇಡಿ ಕಂಡಕ್ಟರ್ ಶಿಕ್ಷಕಿಯಾಗಿ ಸಾಹಿತಿಯಾಗಿ ಮಿಂಚಿದ ಪೂರ್ಣಿಮಾ ಪೆರ್ಲಂಪಾಡಿ



ಬದುಕಿನಲ್ಲಿ ಕಷ್ಟ ಎನ್ನುವುದು ಹೇಗಲೆರುವುದು ಸಹಜ. ಅವನ್ನೆಲ್ಲ ಮೆಟ್ಟಿ ನಿಂತು ಸಾಧನೆಯ ಶಿಖರ ಹತ್ತಲು ಬಹಳ ಪರಿಶ್ರಮ ಅತ್ಯವಶ್ಯಕ ಸಾಧನೆಗೆ ಹಲವು ದಾರಿಗಳಿವೆ. ನಾವಾಡುವ ಮಾತು ನಡೆ ನುಡಿ ಸರಿಯಾದ ದಾರಿಗೆ ಕೊಂಡೊಯ್ಯಲು ಸಹಕಾರಿ ಯಾಗುವುದು. ಏಳು ಬೀಳುಗಳ ನಡುವೆ ಬಸ್ ನಲ್ಲಿ ವಿಸಿಲ್ ಹಾಕುತ್ತಿದ್ದ ಇವರು ಪೆನ್ನು ಪುಸ್ತಕ ಹಿಡಿದು ಬೇರೊಂದು ಲೋಕಕ್ಕೆ ಪಾದಾರ್ಪಣೆ ಮಾಡಿದ ಕ್ಷಣ ಅವರೇ ನಮ್ಮವರಾದ ಪೂರ್ಣಿಮಾ.

ಬಾಲ್ಯದಲ್ಲಿ ಇವರು ತನ್ನ ಪ್ರಾಥಮಿಕ ಶಿಕ್ಷಣ ವನ್ನು ಕುಕ್ಕೇಟಿ, ಪೇರಾಲು, ಅಜ್ಜಾವರ ಹೈಸ್ಕೂಲ್ ಶಿಕ್ಷಣ, ಜೂನಿಯರ್ ಕಾಲೇಜು ಸುಳ್ಯದಲ್ಲಿ ಕಾಲೇಜು ಶಿಕ್ಷಣ ಮುಂದುವರಿಸಿದರು.

ಪುತ್ತೂರು ತಾಲೂಕಿನ ಕೊಳ್ತಿಗೆ ಗ್ರಾಮದ ಅಂಗನವಾಡಿ ಕೇಂದ್ರದ ಕಾರ್ಯಕರ್ತೆಯಾದ ಇವರು ಸುಮಾರು 21 ವರ್ಷಗಳಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪುತ್ತೂರಿನ ಕೊಳ್ತಿಗೆ ವಲಯದ ಕಾರ್ಯಕರ್ತೆಯಾಗಿದ್ದರು.

ಪುಟಾಣಿ ಮಕ್ಕಳ ಶಿಕ್ಷಣದ ಜೊತೆಗೆ ಕವನ ರಚನೆ, ಭಕ್ತಿಗೀತೆ ರಚನೆ, ಭಜನೆ ,ಕುಣಿತ ಭಜನೆ, ಸಾಹಿತ್ಯ ರಚನೆ, ನರ್ಸರಿ, ಮಲ್ಲಿಗೆ ಕೃಷಿ ,ಸಂಘ ಸಂಸ್ಥೆಗಳಿಗೆ ತರಬೇತಿಯನ್ನು ನೀಡುತ್ತಿದ್ದಾರೆ.

ಬೆಳ್ಳಾರೆ ಜೆಸಿಐ ನ ಸದಸ್ಯರಾಗಿ ಜೊತೆ ಕಾರ್ಯದರ್ಶಿಯಾಗಿ 2026ನೇ ಸಾಲಿನ ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ.

ನವೋದಯ ಸ್ವಸಹಾಯ ಸಂಘದ ಸದಸ್ಯ ಷಣ್ಮುಖ ದೇವ ಭಜನಾ ಮಂಡಳಿ ಪೆರ್ಲಂಪಾಡಿ ಇದರ ಮಾಜಿ ಜೊತೆ ಕಾರ್ಯದರ್ಶಿ, ಪ್ರಸ್ತುತ ಸದಸ್ಯರಾಗಿರುತ್ತಾರೆ.

ಕೊಳ್ತಿಗೆ ಒಕ್ಕಲಿಗ ಗೌಡ ಮಹಿಳಾ ಸಂಘದ ಮಾಜಿ ಅಧ್ಯಕ್ಷರಾಗಿ, ಕೊಳ್ತಿಗೆ ಅಂಗನವಾಡಿ ಕಾರ್ಯಕರ್ತೆ ಸಹಾಯಕಿಯರ ಸಂಘದ ಮಾಜಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಪುತ್ತೂರು ಕನ್ನಡ ಸಾಹಿತ್ಯ ಪರಿಸತ್ ನ ಹೋಬಳಿ ಘಟಕ ದ ಮಹಿಳಾ ಪ್ರತಿನಿಧಿಯಾಗಿದ್ದಾರೆ.

ತಂದೆ ತಾಯಿಯ, ತಮ್ಮನವರ ಮತ್ತು ಗಂಡ ಹಾಗೂ ಮಕ್ಕಳ ಪ್ರೋತ್ಸಾಹದಿಂದ ಈ ರೀತಿ ಸಾಧಿಸಲು ಸಾಧ್ಯವಾಯಿತು ಎನ್ನುತ್ತಾರೆ.

ಸುಳ್ಯದಲ್ಲಿ ಪ್ರಥಮ ಬಾರಿ ಮಹಿಳಾ ಕಂಡೆಕ್ಟರ್ ಆಗಿ ಸುಳ್ಯದಿಂದ ತೊಡಿಕಾನ ಅವಿನಾಶ್ ಬಸ್ ನಲ್ಲಿ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಹೆಗ್ಗಳಿಕೆಗೆ ಪಾತ್ರರಾದವರು.

ಶಿಟೋ ರಿಯೋ ಕರಾಟೆ ಸ್ಕೂಲ್ ನ ವಿದ್ಯಾರ್ಥಿ ಯಾಗಿದ್ದರು.

ಅದೇ ರೀತಿ ಅನೇಕ ಸಂಸ್ಥೆಗಳಲ್ಲಿ ವಿವಿಧ ಜವಾಬ್ದಾರಿಯನ್ನು ವಹಿಸಿಕೊಂಡಿರುತ್ತಾರೆ. ಇವರಿಗೆ 18ಕ್ಕೂ ಹೆಚ್ಚು ಪ್ರಶಸ್ತಿಗಳು ಹಾಗೂ ಗೌರವಗಳು ಲಭಿಸಿವೆ.

ಅವುಗಳೆಂದರೆ ಚಂದನ ರಾಜ್ಯೋತ್ಸವ ಪ್ರಶಸ್ತಿ ,ಸಾಹಿತ್ಯ ಕಣ್ಮಣಿ ಪ್ರಶಸ್ತಿ, ಭಾವೈಕ್ಯದ ಸಾಹಿತ್ಯ ರತ್ನ ಪ್ರಶಸ್ತಿ, ಕಾವ್ಯ ಶ್ರೀ ಪ್ರಶಸ್ತಿ, ರಾಷ್ಟ್ರಮಟ್ಟದ ಹಾಗೂ ರಾಜ್ಯಮಟ್ಟದ ಸೇವಾ ರತ್ನ ಪ್ರಶಸ್ತಿ ,ಅಂಗನವಾಡಿ ಕಾರ್ಯಕರ್ತೆ ಮತ್ತು ಸಾಹಿತ್ಯ ಅರೆಸಂಘ ಪುತ್ತೂರು ತಾಲೂಕಿನಿಂದ ಗೌರವಿಸಿ ಪ್ರಶಸ್ತಿ ನೀಡಿರುತ್ತಾರೆ. ಸಂಘದಿಂದ ಸನ್ಮಾನ ಹಾಗೂ ಇನ್ನು ಅನೇಕ ರಾಷ್ಟ್ರ ,ರಾಜ್ಯ, ಜಿಲ್ಲಾ ಮಟ್ಟದ ಪ್ರಶಸ್ತಿಗಳು ಲಭಿಸಿವೆ. ಹಾಗೆಯೇ ಕರ್ನಾಟಕ ಸೇವಾ ರತ್ನ ಲಭಿಸಿವೆ.

ಇತ್ತೀಚೆಗೆ ನಡೆದ ಸುಳ್ಯ ತಾಲೂಕು ಅಜ್ಜಾವರ ಪ್ರತಾಪ್ ಯವಕ ಮಂಡಲ ಹಾಗೂ ಚೈತ್ರಾ ಯುವತಿ ಮಂಡಲ ನಡೆಸಿದ ರಸಪ್ರಶ್ನೆ ಸ್ಪರ್ಧೆಯಲ್ಲಿ ಬಹುಮಾನವನ್ನು ತನ್ನದಾಗಿಸಿಕೊಂಡಿದ್ದಾರೆ.

ಇವರ ಪತಿ ಪರಮೇಶ್ವರ ಗೌಡ ಇವರು ಆರ್ಟಿಸ್ಟ್ ಹಾಗೂ ನರ್ಸರಿ, ಮಲ್ಲಿಗೆ ಕೃಷಿ. ಮಿಥಿಲೇಶ್ ಆರ್ಟಿಸ್ಟ್ ಮತ್ತು ಗ್ರೀಷ್ಮಾ ಗ್ರೀನ್ ನರ್ಸರಿ ನಡೆಸುತ್ತಿದ್ದಾರೆ.


ಇಬ್ಬರು ಮಕ್ಕಳಿದ್ದಾರೆ. ಇವರು ಇನ್ನಷ್ಟು ಸಾಹಿತ್ಯ ಲೋಕದಲ್ಲಿ ಬೆಳಗಲಿ ಪ್ರಶಸ್ತಿಗಳು ಹರಸಿ ಬರಲಿ ಎಂದು ಆಶಿಸೋಣ.





**ಹರ್ಷಿತಾ ಹರೀಶ್ ಕುಲಾಲ್**

# ಮೈಸೂರು ಗಾಂಧಿ, ಸಮಾಜ ಪರಿವರ್ತನೆಯ ಹರಿಕಾರ-ತಗಡೂರು ರಾಮಚಂದ್ರರಾವ್



1898ರಲ್ಲಿ ರಾಮಚಂದ್ರರಾವ್ ರವರು ಇಂದಿನ ಚಾಮರಾಜ ಜಿಲ್ಲೆಯ ಕುದೇರು ಗ್ರಾಮದಲ್ಲಿ ಜನಿಸಿದರು . ಬಾಲ್ಯದಲ್ಲೇ ಆರ್ಥಿಕ ಸಂಕಷ್ಟವನ್ನು ಎದುರಿಸಿದರು. ತಮ್ಮ ಕಾರ್ಯಕ್ಷೇತ್ರವನ್ನು ತಗಡೂರಿನಿಂದ ಪ್ರಾರಂಭಿಸಿ ತಗಡೂರು ರಾಮಚಂದ್ರರಾವ್ ಎಂದೇ ಪ್ರಖ್ಯಾತರಾದರು . ಮೈಸೂರಿನ ರಾಜಕೀಯ ಜಾಗೃತಿಗೆ ಹೊಸ ಬೆಳಕನ್ನು ತಂದರು .

ಮೈಸೂರಿನ ಮರಿ ಮಲ್ಲಪ್ಪ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುವಾಗಲೇ ರಾಷ್ಟ್ರಭಕ್ತಿ ಅವರ ರಕ್ತದಲ್ಲಿ ಹರಿಯತೊಡಗಿತು. 1919ರ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದ ನಂತರ ಯುವಕರಾಗಿದ್ದ ರಾಮಚಂದ್ರರಾವ್ ರವರು ತಮ್ಮ ಜೀವನವನ್ನು ದೇಶಸೇವೆಗೆ ಮೀಸಲಿಟ್ಟರು. ಆ ಘಟನೆಯ ಚಿತ್ರಗಳನ್ನು ಮಾರಾಟ ಮಾಡುವ ಮೂಲಕ ಪ್ರಾರಂಭವಾದ ಅವರ ಚಟುವಟಿಕೆ, ಮುಂದಕ್ಕೆ ಸ್ವದೇಶಿ ವಸ್ತುಗಳ ಪ್ರದರ್ಶನದ ವೇದಿಕೆಯಾಯಿತು. ಚಿಕ್ಕ ವಯಸಸ್ಸಿನಲ್ಲೇ ?ದೇಶದ ಗೌರವಕ್ಕಾಗಿ ನಾನು ನನ್ನ ಜೀವನವನ್ನೇ ಅರ್ಪಿಸುತ್ತೇನೆ,? ಎಂದು ಅವರು ಹೇಳುತ್ತಿದ್ದರು.

ಸ್ವಾತಂತ್ರ್ಯ ಚಳವಳಿಯ ಮುಂಚೂಣಿಯ ಹೋರಾಟಗಾರ : ಗಾಂಧೀಜಿಯವರ ಸತ್ಯಾಗ್ರಹ ಮತ್ತು ಅಹಿಂಸೆಯ ತತ್ವವು ರಾಮಚಂದ್ರರಾವ್ ಅವರ ಜೀವನದ ಮಾರ್ಗದರ್ಶಕವಾದವು. ಬಾಲಗಂಗಾಧರ ತಿಲಕ್ ಅವರಿಂದಲೂ ಅವರು ಪ್ರೇರೇಪಿತರಾಗಿದ್ದರು. 1928ರಲ್ಲಿ ಸೈಮನ್ ಆಯೋಗದ ವಿರುದ್ಧ ಅವರು ಬರೆದ ?ಸೈಮನ್ ಆಯೋಗಕ್ಕೆ ಧಿಕ್ಕಾರ? ಪುಸ್ತಕವು ಮೈಸೂರಿನ ರಾಜಕೀಯ ಭೂದೃಶ್ಯವನ್ನು ಕದಲಿಸಿತು. ಸಾರ್ವಜನಿಕ ಭಾಷಣಗಳಿಂದ ಜನರನ್ನು ಪ್ರೇರೇಪಿಸಿದ ಅವರಿಗೆ ಮೈಸೂರು ರಾಜ್ಯದ ಮೊದಲ ರಾಜಕೀಯ ಕೈದಿ ಎಂಬ ಗೌರವ ಸಿಕ್ಕಿತು.

ಅವರು ಸ್ವದೇಶಿ, ಸತ್ಯಾಗ್ರಹ ಮತ್ತು ಖಾದಿ ಚಳವಳಿಗಳಿಗೆ ಜೀವ ತುಂಬಿದರು. ಬ್ರಿಟಿಷ್ ವಸ್ತ್ರಗಳನ್ನು ತ್ಯಜಿಸಿ ಸ್ಥಳೀಯ ಉತ್ಪಾದನೆಗೆ ಉತ್ತೇಜನ ನೀಡಿದರು.

1942 ರ ಕ್ವಿಟ್ ಇಂಡಿಯಾ (ಭಾರತ ಬಿಟ್ಟು ತೊಲಗಿ ) ಚಳವಳಿಯ ಸಮಯದಲ್ಲಿ , ಅವರು ಸ್ಥಳೀಯ ಹೋರಾಟಗಾರರನ್ನು ಸಂಘಟಿಸಿ ಸತ್ಯಾಗ್ರಹಗಳಲ್ಲಿ ಸಕ್ರಿಯ ಪಾತ್ರವಹಿಸಿದರು. ಚಳುವಳಿ ಸೇರಿದಂತೆ ಆರು ಸಂದರ್ಭಗಳಲ್ಲಿ ಬಂಧನಕ್ಕೊಳಗಾದರು ಮತ್ತು ಒಟ್ಟು 3 ವರ್ಷಗಳ ಕಾಲ ಜೈಲು ಶಿಕ್ಷೆಯನ್ನು ಅನುಭವಿಸಿದರು. ರಾಜಕೀಯ ಹೋರಾಟದ ಜೊತೆಗೆ, ಅವರು ಅಸ್ಪೃಶ್ಯತೆ ನಿವಾರಣೆ, ಸಮಾನತೆ ಮತ್ತು ಶಿಕ್ಷಣ ಹಕ್ಕುಗಳ ಪರ ಹೋರಾಡಿದರು.

ಸ್ವರಾಜ್ಯ ಮಂದಿರ ಮತ್ತು ಸತ್ಯಾಗ್ರಹ ಆಶ್ರಮ.: 1921ರಲ್ಲಿ ತಗಡೂರಿನಲ್ಲಿ ಅವರು ಸ್ಥಾಪಿಸಿದ ಸ್ವರಾಜ್ಯ ಮಂದಿರ ಹಾಗೂ ಸತ್ಯಾಗ್ರಹ ಆಶ್ರಮಗಳು ಅವರ ಚಳವಳಿಯ ಕೇಂದ್ರಗಳಾದವು. ಈ ಆಶ್ರಮಗಳು ಕೇವಲ ರಾಜಕೀಯ ವೇದಿಕೆಗಳಲ್ಲ, ಸಮಾಜ ಪರಿವರ್ತನೆಯ ಪ್ರಯೋಗಶಾಲೆಗಳಾಗಿದ್ದವು.

ಅವರು ಗ್ರಾಮೀಣ ಜನರಿಗೆ ಚರಖಾ ನೂಲುವ ಕೆಲಸ ಕಲಿಸಿ ಆರ್ಥಿಕ ಸ್ವಾವಲಂಬನೆಯನ್ನು ಬೋಧಿಸಿದರು. ತಗಡೂರಿನಿಂದಲೇ ಮೈಸೂರಿನ ಖಾದಿ ಚಳವಳಿಗೆ ಜೀವ ಬಂತು.

ಖಾದಿ ಚಳವಳಿಯ ಶಿಲ್ಪಿ : 1925ರಲ್ಲಿ ಅವರು ತಗಡೂರಿನಲ್ಲಿ ಖದ್ದರ್ ಸಹಕಾರ ಸಂಘವನ್ನು ಪ್ರಾರಂಭಿಸಿದರು. ಈ ಸಂಘವು ಮಹಿಳೆಯರು ಮತ್ತು ಬಡ ಜನರಿಗೆ ನೂಲು ನೇಯುವ ಮೂಲಕ ಜೀವನೋಪಾಯದ ದಾರಿ ತೆರೆಯಿತು. ಅದೇ ವರ್ಷ ಮೈಸೂರಿನ ಲಾನ್ಸ್‌ಡೌನ್ ಬಿಲ್ಡಿಂಗ್‌ನಲ್ಲಿ ಅವರು ಖದ್ದರ್ ಪರಸ್ಪರ ಸಹಾಯ ಸಂಘ? ಸ್ಥಾಪಿಸಿದರು.

ಶ್ರೀ ರಾವ್ ಅವರು ದಕ್ಷಿಣದ ಹಲವಾರು ಪ್ರಸಿದ್ಧ ಯಾತ್ರಾ ಕೇಂದ್ರಗಳಲ್ಲಿ ಹರಿಜನರಿಗೆ ದೇವಾಲಯಗಳನ್ನು ತೆರೆಯಲು ಶಿಸ್ತುಬದ್ಧ ಮತ್ತು ಅಹಿಂಸಾತ್ಮಕ ಸತ್ಯಾಗ್ರಹವನ್ನು ಮಾಡಿದ್ದರು.

ಖಾದಿ ಮತ್ತು ಹರಿಜನರ ಹಿತಾಸಕ್ತಿಗಳನ್ನು ಉತ್ತೇಜಿಸಲು ಶ್ರೀ ರಾವ್ ಅವರ ಧೈರ್ಯಶಾಲಿ ನಾಯಕತ್ವ ಮತ್ತು ಸಮರ್ಪಿತ ಕೆಲಸಕ್ಕಾಗಿ ಮಹಾತ್ಮಾ ಗಾಂಧಿಯವರು ಅವರನ್ನು ಸಂಪೂರ್ಣ ಪ್ರಶಂಸೆಯಿಂದ ಹೊಗಳಿದ್ದರು. ಭೂದಾನ–ಗ್ರಾಮದಾನ ಚಳುವಳಿಗಾಗಿ ವಿನೋಬಾ ಭಾವೆ ಭಾವೆಯವರು ಕರ್ನಾಟಕದಲ್ಲಿ ಕೈಗೊಂಡ ಪಾದಯಾತ್ರೆಯಲ್ಲಿ ಶ್ರೀ ರಾವ್ ಅವರು ಭಾಗವಹಿಸಿದಾಗ , ಶ್ರೀ ವಿನೋಬಾ ಭಾವೆ ಕೂಡ ಅವರ ಕೆಲಸವನ್ನು ಮೆಚ್ಚಿದ್ದರು.

1934ರಲ್ಲಿ ರಾಮಚಂದ್ರರಾಯರು, ಮಹಾತ್ಮ ಗಾಂಧಿಯವರನ್ನು ತಗಡೂರಿಗೆ ಕರೆತಂದರು . ಮಹಾತ್ಮ ಗಾಂಧಿಜಿ ತಗಡೂರಿಗೆ ಭೇಟಿ ನೀಡಿದಾಗ, ರಾಮಚಂದ್ರರಾವ್ ಅವರ ಕಾರ್ಯವನ್ನು ಪ್ರಶಂಸಿಸಿದರು. ಗಾಂಧಿಜಿಯ ಪ್ರೇರಣೆಯಿಂದ ರಾಮಚಂದ್ರರಾಯರು ತಗಡೂರಿನಲ್ಲಿ 3.5 ಎಕರೆ ಭೂಮಿ ಖರೀದಿಸಿ ಖಾದಿ ಘಟಕ ನಿರ್ಮಿಸಿದರು.

1959ರಲ್ಲಿ ಸ್ಥಾಪಿತವಾದ ತಗಡೂರು ಖಾದಿ ಇನ್‌ಸ್ಟಿಟ್ಯೂಟ್ ದಶಕಗಳ ಕಾಲ ಖಾದಿ ವಸ್ತ್ರ ಮತ್ತು ಚಾಪೆ ಉತ್ಪಾದನೆಯಲ್ಲಿ ಹೆಸರು ಗಳಿಸಿತು. ?ಖಾದಿ ಕೇವಲ ಬಟ್ಟೆ ಅಲ್ಲ, ಅದು ಸ್ವಾತಂತ್ರ್ಯದ ಪ್ರತೀಕ,? ಎಂದು ರಾಮಚಂದ್ರರಾವ್ ಹೇಳುತ್ತಿದ್ದರು.

ಸಮಾಜ ಸುಧಾರಣೆ: ರಾಮಚಂದ್ರರಾವ್ ರಾಜಕೀಯ ಹೋರಾಟದ ಜೊತೆಗೆ ಸಾಮಾಜಿಕ ಪುನರುತ್ಥಾನದ ಕೆಲಸಗಳನ್ನೂ ಮುನ್ನಡೆಸಿದರು.

ಅಸ್ಪೃಶ್ಯತೆ ನಿವಾರಣೆಗಾಗಿ ಅವರು ಜೀವನವಿಡಿ ಹೋರಾಡಿದರು . ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಶಾಲಾ ಪ್ರವೇಶ ಮತ್ತು ಶಿಕ್ಷಣದ ಅವಕಾಶ ಕಲ್ಪಿಸಿದರು. ಅವರು ಗೋ ರಕ್ಷಣೆ, ಧಾರ್ಮಿಕ ಗೌರವ ಮತ್ತು ಪರಿವರ್ತನೆ ವಿರೋಧಿ ಚಳವಳಿಗಳನ್ನೂ ಮುನ್ನಡೆಸಿದರು.




ಗೌರವಗಳು ಮತ್ತು ಪ್ರಶಸ್ತಿಗಳು : ಅವರ ಸಮಾಜಸೇವೆಯನ್ನು ಗುರುತಿಸಿ 1983ರಲ್ಲಿ ಜಮ್ನಾ ಲಾಲ್ ಬಜಾಜ್ ಪ್ರಶಸ್ತಿ (ಅಂಟಿಣಡಿಣಾಥಿಣುತಜ ಘಾಂಡಿಇ) ನೀಡಲಾಯಿತು. ಪ್ರಶಸ್ತಿ ಉಲ್ಲೇಖದಲ್ಲಿ ?ಸ್ವದೇಶಿ, ಖಾದಿ, ಅಸ್ಪೃಶ್ಯತೆ ನಿವಾರಣೆ ಹಾಗೂ ಗ್ರಾಮೋದ್ಯಮದ ನಿರ್ಮಾಣದಲ್ಲಿ ನೀಡಿದ ಅಮೂಲ್ಯ ಕೊಡುಗೆ? ಎಂದು ಪ್ರಶಂಸಿಸಲಾಯಿತು. ವಾರ್ತಾ ಮತ್ತು ಪ್ರಚಾರ ಇಲಾಖೆಯವರು , ಜಿ. ವಿ. ಅಯ್ಯರ್ ಅವರ ನಿರ್ದೇಶನದಲ್ಲಿ ರಾಮಚಂದ್ರರಾಯರ ಜೀವನದ ಮೇಲೆ ಕಿರು ಚಿತ್ರವನ್ನು ನಿರ್ಮಿಸಿದ್ದಾರೆ. ಅದು ಯೂಟ್ಯೂಬ್ ನಲ್ಲಿ ಲಭ್ಯವಿದೆ . ಜನಸಾಮಾನ್ಯರಲ್ಲಿ ಅವರು ?ಮೈಸೂರಿನ ಗಾಂಧಿ? ಎಂಬ ಹೆಸರಿನಿಂದ ಪ್ರಸಿದ್ಧರಾದರು.

ರಾಜಕೀಯ ಹುದ್ದೆ ಅಥವಾ ಸಂಪತ್ತು ಯಾವುದನ್ನೂ ಬಯಸದ ರಾಮಚಂದ್ರರಾವ್ 1989ರವರೆಗೆ ಸೇವಾ ಮಾರ್ಗದಲ್ಲಿಯೇ ಜೀವನ ಕಳೆದರು. ಅವರು ತಮ್ಮ ವೈಯಕ್ತಿಕ ಜೀವನಕ್ಕಾಗಿ ಯಾವುದೇ ಪಿಂಚಣಿ ಅಥವಾ ಅನುದಾನಕ್ಕಾಗಿ ಅರ್ಜಿ ಸಲ್ಲಿಸಲು ನಿರಾಕರಿಸಿದ್ದರು. ಅವರ ತಮ್ಮ ಸಾಧನೆಯಲ್ಲಿ ಸಂತೋಷವನ್ನು ಅನುಭವಿಸಿದರು . ಅವರು ಪ್ರಾರಂಭಿಸಿದ ಖಾದಿ ಸಂಸ್ಥೆಗಳು ಇಂದಿಗೂ ಕರ್ನಾಟಕ ಸರ್ವೋದಯ ಸಂಘದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ.

ಅವರು ಶಾರದ ನಿಕೇತನ ಎಂಬ ಸಂಸ್ಥೆಯನ್ನು ಮೈಸೂರಿನ ಝಾನ್ಸಿ ಲಕ್ಷ್ಮಿ ಬಾಯಿ ರಸ್ತೆಯಲ್ಲಿ ಹುಟ್ಟುಹಾಕುವಲ್ಲಿ ಪ್ರಮುಖ ಪಾತ್ರ ವಹಿಸಿದರು . ಆ ಸಂಸ್ಥೆ ಇಂದೂ ಸಹ ಬಡ ವಿದ್ಯಾರ್ಥಿಗಳಿಗೆ ವಿದ್ಯೆ ನೀಡುವುದು ಮತ್ತು ಹಾಸ್ಟೆಲ್ ಸೇವೆಯನ್ನು ಒದಗಿಸುತ್ತಿದೆ .

ಮೈಸೂರಿನ ಚಾಮುಂಡಿಪುರಂ ವೃತ್ತಕ್ಕೆ ತಗಡೂರು ರಾಮಚಂದ್ರ ರಾವ್ ವೃತ್ತ ಎಂದು ಹೆಸರಿಡಲಾಗಿದೆ. ಅಲ್ಲೆ ಪಕ್ಕದಲ್ಲಿರುವ ಉದ್ಯಾನವನದಲ್ಲಿ ಅವರ ಪುತ್ತಳಿಯನ್ನು ಸ್ಥಾಪಿಸಲಾಗಿದೆ . ಅಕ್ಟೋಬರ್ 13 –2021 ರಂದು ಮೈಸೂರಿನ ಅಂಚೆ ತರಬೇತಿ ಕೇಂದ್ರದಲ್ಲಿ ಅಂಚೆ ಇಲಾಖೆ ತಗಡೂರು ರಾಮಚಂದ್ರ ರಾವ್ ಅವರ ವಿಶೇಷ ಅಂಚೆ ಲಕೋಟೆಯನ್ನು ಬಿಡುಗಡೆ ಮಾಡಿದೆ.

ತಗಡೂರು ರಾಮಚಂದ್ರರಾವ್ ಅವರ ಜೀವನವು ಸತ್ಯ, ಅಹಿಂಸೆ ಮತ್ತು ಮಾನವೀಯತೆಯ ಸಾರ್ಥಕ ಪ್ರತಿರೂಪ. ಅವರು ನೀಡಿದ ಸಂದೇಶ ಇಂದು ಕೂಡ ಸ್ಪಷ್ಟವಾಗಿದೆ: ?ಸ್ವಾತಂತ್ರ್ಯವು ಕೇವಲ ರಾಜಕೀಯದಲ್ಲಲ್ಲ ? ಅದು ಸಾಮಾಜಿಕ ಸಮಾನತೆ, ನೈತಿಕ ಶಕ್ತಿ ಮತ್ತು ಆರ್ಥಿಕ ಸ್ವಾವಲಂಬನೆಯ ಸಮಗ್ರ ರೂಪ.? ಇದನ್ನು ಅವರು ಜೀವನ ಪರ್ಯಂತ ಪ್ರತಿಪಾದಿಸಿದರು . ಇಂತಹ ಮಹನೀಯರು ನಮಗೂ , ಮುಂದಿನ ಪೀಳಿಗೆಗೂ ಆದರ್ಶ . ಇಂತಹ ಪುಣ್ಯ ಪುರುಷರನ್ನು ಪಡೆದ ಕನ್ನಡ ನಾಡು ಧನ್ಯ.



**ಸ್ವಾಮಿನಾಥನ್ ಬೆಂಗಳೂರು**

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,